ಸಂಪುಟ 01 । ಸಂಚಿಕೆ 24 । ಗುರುವಾರ 04ಡಿಸೆಂಬರ್ 2025 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1.ಭಾರತೀಯ ನೌಕಾ ದಿನ (Indian Navy Day)**
1971ರ ಭಾರತ?ಪಾಕಿಸ್ತಾನ ಯುದ್ಧದಲ್ಲಿ ಭಾರತೀಯ ನೌಕಾಪಡೆಯ "ಆಪರೇಷನ್ ಟ್ರೈಡೆಂಟ್" ಎಂಬ ಯಶಸ್ವಿ ದಾಳಿಯನ್ನು ಸ್ಮರಿಸಿಕೊಳ್ಳಲಾಗುತ್ತದೆ.ಈ ದಿನ ನೌಕಾ ಪಡೆಯಲ್ಲಿ

**2)ದತ್ತಾತ್ರೇಯ ಜಯಂತಿ:**
2025 ರಲ್ಲಿ ದತ್ತಾತ್ರೇಯ ಜಯಂತಿಯನ್ನು ಡಿಸೆಂಬರ್ 4, 2025 ರಂದು ಆಚರಿಸಲಾಗುತ್ತದೆ. ಈ ಹಬ್ಬವು ಮಾರ್ಗಶಿರ ಹುಣ್ಣಿಮೆಯಂದು ಬರುತ್ತದೆ, ಇದಕ್ಕಾಗಿ ಪೂರ್ಣಿಮಾ ತಿಥಿ ಡಿಸೆಂಬರ್ 3, 2025 ರಂದು ರಾತ್ರಿ 10:27 ಕ್ಕೆ ಆರಂಭವಾಗಿ ಡಿಸೆಂಬರ್ 4, 2025 ರಂದು 11:59 ಕ್ಕೆ ಮುಕ್ತಾಯಗೊಳ್ಳುತ್ತದೆ.

**3. ವನ್ಯಜೀವಿ ಸಂರಕ್ಷಣೆ ದಿನ (Wildlife Conservation Day)** ವಿಶ್ವದ ಅಪಾಯದಲ್ಲಿರುವ ಪ್ರಾಣಿ?ಪಕ್ಷಿಗಳನ್ನು ಸಂರಕ್ಷಿಸುವ ಬಗ್ಗೆ ಜಾಗೃತಿ ಮೂಡಿಸುವ ದಿನ.ಕಳ್ಳಬೇಟೆ ತಡೆ, ವಾಸಸ್ಥಾನ ಸಂರಕ್ಷಣೆ ಮತ್ತು ಪರಿಸರ ಜಾಗೃತಿಗೆ ಒತ್ತು.

**4. ಅಂತರರಾಷ್ಟ್ರೀಯ ಬ್ಯಾಂಕಿಂಗ್ ದಿನ (International Bank Workers' Day / International Banks Day)** ಬ್ಯಾಂಕಿಂಗ್ ಕ್ಷೇತ್ರದ ಉದ್ಯೋಗಿಗಳ ಸೇವೆ, ಆರ್ಥಿಕ ವ್ಯವಸ್ಥೆಗೆ ಅವರ ಕೊಡುಗೆಯನ್ನು ಗುರುತಿಸಲು ಆಚರಿಸಲಾಗುತ್ತದೆ.

**5. ಪ್ರಪಂಚದಾದ್ಯಂತ ವಿವಿಧ ಸ್ಥಳೀಯ/ಪ್ರಾದೇಶಿಕ ಆಚರಣೆಗಳು**

**6) ಸೆಂಟ್ ಬಾರ್ಬರಾ ಡೇ (St. Barbara's Day)**
ಕ್ರಿಶ್ಚಿಯನ್ ಸಮುದಾಯಗಳಲ್ಲಿ ಕೆಲವೆಡೆ ಆಚರಣೆ.

## ಸುಭಾಷಿತ

ಸಾಧನೆಯ ಹಾದಿ ಹೂವಿನ
ಹಾಸಿಗೆಯಲ್ಲ. ಯಶಸ್ಸನ್ನು
ದಕ್ಕಿಸಿಕೊಳ್ಳಬೇಕೆಂದರೆ
ವೈಫಲ್ಯಗಳೊಂದಿಗೆ ಸೆಣಸಲು
ಸಿದ್ಧರಿರಲೇಬೇಕು.

ಮಿಕೀ ರೂನಿ ಅಮೆರಿಕದ ಖ್ಯಾತ ನಟ

# ಪೂರ್ವ ಪ್ರಾಥಮಿಕ ತರಗತಿಗಳ ಮಕ್ಕಳಿಗೆ ಮೊಟ್ಟೆ ಮತ್ತು ಬಾಳೆಹಣ್ಣು ಭಾಗ್ಯ

**ಬೆಂಗಳೂರು: ಕರ್ನಾಟಕ ಸರ್ಕಾರವು 2025–26ನೇ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಶಾಲೆಗಳ ಪೂರ್ವ ಪ್ರಾಥಮಿಕ ತರಗತಿಗಳ ಮಕ್ಕಳಿಗೆ ಮೊಟ್ಟೆ ಮತ್ತು ಬಾಳೆಹಣ್ಣುಗಳ ವಿತರಣೆಯನ್ನು ವಿಸ್ತರಿಸಿದೆ. ಇದರೊಂದಿಗೆ ರಾಜ್ಯಾದ್ಯಂತ ಸರ್ಕಾರಿ ಶಾಲೆಗಳ ಒಟ್ಟು 1,98,270 ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.**

ಮೊಟ್ಟೆ ಸೇವಿಸದ ಮಕ್ಕಳಿಗೆ ಎಲ್ಲಾ ಕೆಲಸದ ದಿನಗಳಲ್ಲಿ ಪ್ರತಿದಿನ ಎರಡು ಬಾಳೆಹಣ್ಣುಗಳನ್ನು ನೀಡಲಾಗುವುದು. ಈ ಹಿಂದೆ, ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರ ಮೊಟ್ಟೆ ಮತ್ತು ಬಾಳೆಹಣ್ಣುಗಳನ್ನು ನೀಡಲಾಗುತ್ತಿತ್ತು. ಅಜೀಂ ಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕಾಂಶವಾಗಿ ಮೊಟ್ಟೆ ಮತ್ತು ಬಾಳೆಹಣ್ಣುಗಳನ್ನು ವಿತರಿಸಲು ರಾಜ್ಯ ಸರ್ಕಾರ ಜೂನ್ 5ರಂದು ಆದೇಶ ಹೊರಡಿಸಿತು. ಒಟ್ಟು ಫಲಾನುಭವಿಗಳು: 2024–25ರವರೆಗೆ ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ 2,619 ಪೂರ್ವ ಪ್ರಾಥಮಿಕ ತರಗತಿಗಳು ಇದ್ದವು. ಭಾರೀ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಈ ಶೈಕ್ಷಣಿಕ ವರ್ಷದಿಂದ ಸುಮಾರು 70



ಕೋಟಿ ರೂ. ವೆಚ್ಚದಲ್ಲಿ 5,000 ಸರ್ಕಾರಿ ಶಾಲೆಗಳಲ್ಲಿ ಅವುಗಳನ್ನು ಪ್ರಾರಂಭಿಸಲಾಯಿತು.

ರಾಜ್ಯ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳಿಗೆ ಮೊಟ್ಟೆ/ಬಾಳೆಹಣ್ಣು ವಿಸ್ತರಿಸುವ ಸರ್ಕಾರದ ಕ್ರಮವನ್ನು ಸ್ವಾಗತಿಸಿದೆ. ಮೊಟ್ಟೆ/ಬಾಳೆಹಣ್ಣುಗಳ ವಿತರಣೆಯು ಚಿಕ್ಕ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪ್ರಯೋಜನಕಾರಿಯಾಗಿದೆ. ಕಳೆದ ವರ್ಷ, ಮೊಟ್ಟೆ ಮತ್ತು ಬಾಳೆಹಣ್ಣು ತಿನ್ನದ ಮಕ್ಕಳಿಗೆ ಕಡಲೆಕಾಯಿ ಚಿಕ್ಕಿಗಳನ್ನು ನೀಡಲಾಗುತ್ತಿತ್ತು. ಆದರೆ, ಪೂರೈಕೆದಾರರು ಕಳಪೆ ಗುಣಮಟ್ಟದ ಚಿಕ್ಕಿಗಳನ್ನು ಒದಗಿಸಿದ್ದರಿಂದ ಸರ್ಕಾರ ಅವುಗಳ ವಿತರಣೆಯನ್ನು ನಿಲ್ಲಿಸಿತು. ರಾಜ್ಯ ಸರ್ಕಾರವು ಈ ವರ್ಷ ಪೂರ್ವ ಪ್ರಾಥಮಿಕ ತರಗತಿಗಳಿಂದ 10 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಮೊಟ್ಟೆ/ಬಾಳೆಹಣ್ಣು ವಿತರಣೆಗಾಗಿ ಒಟ್ಟು 755.62 ಕೋಟಿ ಮೀಸಲಿಟ್ಟಿದೆ.

ಇದರೊಂದಿಗೆ, ಸರ್ಕಾರಿ ಶಾಲೆಗಳಲ್ಲಿ 40,47,461 ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ 11,13,929 ಮಕ್ಕಳು 51,61,390 ಮಕ್ಕಳು ಈ ಯೋಜನೆಯ ಫಲಾನುಭವಿಗಳಾಗಲಿದ್ದಾರೆ. ಸರ್ಕಾರಿ ಶಾಲಾ ಮಕ್ಕಳಿಗೆ ಹೆಚ್ಚುವರಿ ಪೌಷ್ಟಿಕಾಂಶವಾಗಿ ಮೊಟ್ಟೆ/ಬಾಳೆಹಣ್ಣುಗಳನ್ನು ವಿತರಿಸಲು ಮೂರು ವರ್ಷಗಳ ಕಾಲ 1,500 ಕೋಟಿ ಅನುದಾನ ನೀಡಲು ಪ್ರತಿಷ್ಠಾನವು ಕಳೆದ ವರ್ಷ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು. ಅದರಂತೆ, ಈ ವರ್ಷ, ಪ್ರತಿಷ್ಠಾನವು 501.68 ಕೋಟಿ ನೀಡುತ್ತಿದೆ ಮತ್ತು ಉಳಿದ 253.94 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಭರಿಸಲಿದೆ. ಯೋಜನೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು, ಪ್ರತಿದಿನ ಬೆಳಿಗ್ಗೆ 11 ಗಂಟೆಗೆ ಶಾಲೆಗೆ ಬರುವ ಎಲ್ಲಾ ಮಕ್ಕಳ ಹಾಜರಾತಿಯನ್ನು ಸಂಗ್ರಹಿಸಿ ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ (AT) ಪೋರ್ಟಲ್‌ನಲ್ಲಿ ನಮೂದಿಸಲಾಗುತ್ತದೆ. ಶಾಲೆಗಳ ಮುಖ್ಯೋಪಾಧ್ಯಾಯರು ಈ ಮಾಹಿತಿಯನ್ನು ಔಖಿ ಮೂಲಕ ಇ–ಸಹಿಯೊಂದಿಗೆ ದೃಢೀಕರಿಸಿ ಸಾರ್ವಜನಿಕ ಶಿಕ್ಷಣ ಆಯುಕ್ತರು ಮತ್ತು ಇತರ ಇಲಾಖೆ ಅಧಿಕಾರಿಗಳಿಗೆ ಸಲ್ಲಿಸಲು ಸೂಚಿಸಲಾಗಿದೆ.

# ರಾಯಚೂರು ತಾಪಂ ಕಚೇರಿಗೆ ಜಿಪಂ ಸಿಇಓ ದಿಢೀರ್ ಭೇಟಿ; ಪರಿಶೀಲನೆ



❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ಡಿಸೆಂಬರ್ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕಾಂದೂ ಅವರು ರಾಯಚೂರು ತಾಲೂಕ ಪಂಚಾಯತಿ ಕಚೇರಿಗೆ ಡಿಸೆಂಬರ್ 3ರಂದು ಮಧ್ಯಾಹ್ನ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲಿನ ಆಡಳಿತ ಶಾಖೆ, ನರೇಗಾ ಶಾಖೆಗೆ ತೆರಳಿ ವೀಕ್ಷಣೆ ನಡೆಸಿ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡರು. ನಂತರ ಕಾರ್ಯನಿರ್ವಾಹಕ ಅಧಿಕಾರಿಯವರ ಚೇಂಬರ್‌ಗೆ ತೆರಳಿ ತಾಲೂಕ ಪಂಚಾಯತಿ ಕಾರ್ಯಾಲಯದ ಕಾರ್ಯವೈಖರಿಯ ಬಗ್ಗೆ ಪರಿಶೀಲಿಸಿದರು. ನಂತರ ಸಾಮಾರ್ಥ್ಯ ಸೌಧಕ್ಕೆ ಭೇಟಿ ನೀಡಿ, ಎನ್‌ಆರ್‌ಎಲ್‌ಎಂ ಸಿಬ್ಬಂದಿಯವರೊಂದಿಗೆ ಮಾತನಾಡಿ ಮಾಹಿತಿ ಪಡೆದರು. ನಂತರ ಅಕ್ಷರ ದಾಸೋಹ ಶಾಖೆಗೆ ಭೇಟಿ ನೀಡಿ ಪರಿಶೀಲಿಸಿದರು. ಸಾಮರ್ಥ್ಯ ಸೌಧದಲ್ಲಿ ಸ್ವಚ್ಚತೆಯನ್ನು ಕಾಪಾಡಲು ಸಂಬಂಧಿಸಿದ ಸಿಬ್ಬಂದಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಪವಾರ್, ನರೇಗಾ ಸಹಾಯಕ ನಿರ್ದೇಶಕರಾದ ಹನುಮಂತ, ಪಂಚಾಯತ್ ರಾಜ್‌ನ ಸಹಾಯಕ ನಿರ್ದೇಶಕರಾದ ಶಿವಪ್ಪ ಹಾಗೂ ಕಚೇರಿಯ ಸಿಬ್ಬಂದಿ ಹಾಜರಿದ್ದರು.

# ರಸ ಪ್ರಶ್ನೆ ಸ್ಪರ್ಧೆ: ಬ್ರಿಲಿಯಂಟ್ ಶಾಲೆ ವಿದ್ಯಾರ್ಥಿಗಳಿಗೆ ಪ್ರಥಮ ಸ್ಥಾನ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಇಂಗಳೇಶ್ವರ ಗ್ರಾಮದಲ್ಲಿ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ಮೈಲೇಶ್ವರದ ಬ್ರಿಲಿಯಂಟ್ ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.**

ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಜಗದ್ಗುರು ಶ್ರೀ ರೇವಣಸಿದ್ಧೇಶ್ವರ ಜಾತ್ರಾ ನಿಮಿತ್ಯವಾಗಿ ಶಿಕ್ಷಕರ ಬಳಗದ ವತಿಯಿಂದ ನ.30 ರಂದು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ರಸಪ್ರಶ್ನೆ ಕಾರ್ಯಕ್ರಮದ ಪ್ರವೇಶ ಪರೀಕ್ಷೆಯಲ್ಲಿ ಜಿಲ್ಲೆಯ ಸುಮಾರು 50 ಪ್ರೌಢಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಿದ್ದ ಬ್ರಿಲಿಯಂಟ್ ಪ್ರೌಢಶಾಲೆ ಮೈಲೇಶ್ವರದ ವಿದ್ಯಾರ್ಥಿಗಳ ಪೈಕಿ 4 ತಂಡಗಳು ಮುಂದಿನ ಹಂತಕ್ಕೆ ಆಯ್ಕೆಗೊಂಡಿದ್ದವು.

ಇವುಗಳಲ್ಲಿ ಬ್ರಿಲಿಯಂಟ್ (ಡಿ) ತಂಡದ ವಿದ್ಯಾರ್ಥಿಗಳು 50 ಕ್ಕೆ 37.5 ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ಸ್ಥಾನಕ್ಕೆ ಭಾಜನರಾದರು.ಅದೇ



ರೀತಿ ಡಿಸೆಂಬರ್ 2ರಂದು ನಡೆದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ 10 ತಂಡಗಳ ಪೈಕಿ ಬ್ರಿಲಿಯಂಟ್ ಪ್ರೌಢಶಾಲೆ ಮೈಲೇಶ್ವರದ 4 ತಂಡಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಂತಿಮವಾಗಿ ಬ್ರಿಲಿಯಂಟ್ (ಡಿ) ತಂಡದ ವಿದ್ಯಾರ್ಥಿಗಳು ಈ ರೋಚಕ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು 15000/– ರೂ. ಗಳ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳ ಈ ಅದ್ಭುತ ಸಾಧನೆಗೆ ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಮತ್ತು ಬ್ರಿಲಿಯಂಟ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಮೈಲೇಶ್ವರದ ಮುಖ್ಯ ಗುರುಗಳು ಹಾಗೂ ಸಮಸ್ತ ಸಿಬ್ಬಂದಿ ವರ್ಗದವರು ಅಭಿನಂದಿಸಿ ಶುಭ ಶುಭ ಹಾರೈಸಿದ್ದಾರೆ.

# ರಾಯಚೂರ ಸಿಟಿಗೆ ಕ್ವಾಲಿಟಿ ನೀರು ಪೂರೈಕೆಯಾಗಲಿ: ಸಚಿವರಾದ ಬೈರತಿ ಸುರೇಶ ಕಟ್ಟುನಿಟ್ಟಿನ ಸೂಚನೆ

**ರಾಯಚೂರು ಡಿಸೆಂಬರ್ 03 ( ಕ.ವಾ.): ರಾಯಚೂರು ಸಿಟಿಗೆ ಕ್ವಾಲಿಟಿ ನೀರು ಪೂರೈಕೆಗೆ ಅಗತ್ಯ ಕ್ರಮವಹಿಸಬೇಕು ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬೈರತಿ ಸುರೇಶ ಅವರು ರಾಯಚೂರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಿಸೆಂಬರ್ 3ರಂದು ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.**

ಜನರ ಆರೋಗ್ಯ ತುಂಬಾ ಮುಖ್ಯ. ಜನತೆಗೆ ಶುದ್ಧ ಮತ್ತು ಸಕಾಲಕ್ಕೆ ನೀರು ಕೊಡುವುದು ನಮ್ಮ ಆದ್ಯ ಕಾರ್ಯವಾಗಬೇಕಿದೆ. ಈ ದಿಶೆಯಲ್ಲಿ ಯೋಚಿಸಿ ಪಾಲಿಕೆಯ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ಕನಿಷ್ಟ 40 ಲಕ್ಷ ರೂ.ಗಳನ್ನು ಕುಡಿವ ನೀರಿನ ಲಿಕೇಜ್, ಪೈಪ್ ದುರಸ್ತಿಯಂತಹ ಬೇರೆ ಬೇರೆ ಕಾರ್ಯಗಳಿಗೆಂದೇ ಮೀಸಲಿರಿಸಿ, ಶುದ್ಧ ನೀರು ಪೂರೈಕೆಗೆ ಒತ್ತು ಕೊಡಬೇಕು ಎಂದು ಪಾಲಿಕೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕುಡಿವ ನೀರು ಪರೀಕ್ಷೆಯ ಬಗ್ಗೆ ಸಚಿವರು ಅಧಿಕಾರಿಗಳಿಗೆ ಕೇಳಿದರು. ಪ್ರತಿ ದಿನ ಮೂರು ಭಾರಿ ಪರೀಕ್ಷೆಗೊಳಪಡಿಸಿಯೇ ಕುಡಿವ ನೀರು ಪೂರೈಕೆ



ಮಾಡುತ್ತಿದ್ದೇವೆ. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ಪ್ರಯೋಗಾಲಯ ಕೇಂದ್ರದಲ್ಲಿ ಸಹ ನೀರನ್ನು ಪರೀಕ್ಷಿಸಿ ಸಿಟಿಗೆ ನೀರು ಪೂರೈಕೆ ಮಾಡುತ್ತಿದ್ದೇವೆ ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು. ತೆರಿಗೆ ವಸೂಲಾತಿಯಲ್ಲಿ ಪ್ರಗತಿ ತೋರಿದ್ದೀರಾ ಎಂದು ಸಚಿವರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಪ್ರಶ್ನಿಸಿದರು.

ಮಹಾನಗರ ಪಾಲಿಕೆಯಿಂದ ರಾಯಚೂರು ಸಿಟಿ ವ್ಯಾಪ್ತಿಯಲ್ಲಿ ವಿಶೇಷ ಅಭಿಯಾನ ನಡೆಸಿ ತೆರಿಗೆ ಸಂಗ್ರಹದಲ್ಲಿ ಪ್ರಗತಿ ತೋರಿದ್ದೇವೆ ಎಂದು ರಾಯಚೂರು ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ ಅವರು ಸಚಿವರಿಗೆ ತಿಳಿಸಿದರು. ಪೌರಕಾರ್ಮಿಕರ ನೇಮಕಾತಿಗೆ ಕ್ರಮ: ರಾಯಚೂರು ನಗರಸಭೆಯು ಮಹಾನಗರ ಪಾಲಿಕೆಯಾಗಿ ಮೇಲ್ದರ್ಗೇರಿದ ಬಳಿಕ ಹೆಚ್ಚುವರಿ 75 ಪೌರ ಕಾರ್ಮಿಕರ ನೇಮಕಾತಿಯ ಪ್ರಸ್ತಾವಣೆಯ ಬಗ್ಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸಚಿವರ ಗಮನಕ್ಕೆ ತಂದರು. ಸಭೆಯಲ್ಲಿಯೇ, ಬೆಂಗಳೂರಿಗೆ ದೂರವಾಣಿ ಕರೆ ಮಾಡಿದ ಸಚಿವರು, ಪ್ರಸ್ತಾವಣೆಯ ಬಗ್ಗೆ ಕೂಡಲೇ ಗಮನ ಹರಿಸಿ ಹೆಚ್ಚುವರಿ 75 ಪೌರ ಕಾರ್ಮಿಕರ ನೇಮಕಾತಿಯ ಪ್ರಕ್ರಿಯೆಯನ್ನು ಸಂಜೆಯೊಳಗೆ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು. ಸಿಟಿಯಲ್ಲಿ ಒತ್ತುವರಿ ತಡೆಯಬೇಕು: ರಾಯಚೂರು ಸಿಟಿ ವ್ಯಾಪ್ತಿಯಲ್ಲಿನ ಕೆರೆ ಜಾಗ, ಸ್ಮಶಾನ ಜಾಗ ಸೇರಿದಂತೆ ಯಾವುದೇ ಸಾರ್ವಜನಿಕ ಜಾಗವು, ಯಾವುದೇ ವ್ಯಕ್ತಿಗಳಿಂದ ಅತಿ–

# ಮಹಿಳೆಯರ ಸಾಧನೆ ಸಮಾಜಕ್ಕೆ ಸ್ಪೂರ್ತಿ :ಶಾಸಕ ಮಾನಪ್ಪ ವಜ್ಜಲ್

❏ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಮಹಿಳೆಯರ ಜೀವನದಲ್ಲಿ ಹಲವು ಪಾತ್ರಗಳನ್ನು ನಿಭಾಯಿಸುವ ಮೂಲಕ ಸಮಾಜದ ಸ್ಪೂರ್ತಿಯಾಗಿದ್ದು, ಕುಟುಂಬದ ಜವಬ್ದಾರಿ ಹೊತ್ತು ಸಂಸಾರ ನಿರ್ವಹಣೆಯಲ್ಲಿ ಅತಿಮುಖ್ಯ ಪಾತ್ರ ವಹಿಸುರುತ್ತಾಳೆ ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.**

ಪಟ್ಟಣದ ಆರ್ ಎಂ ಎಸ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ ನೂತನ ಗಾರ್ಮೆಂಟ್ಸ ಸ್ಥಾಪನೆಗೆ ಚಾಲನೆ ಹಾಗೂ ಹೊಲಿಗೆ ಮತ್ತು ಬ್ಯೂಟಿಷಿಯನ್ ಕಲಿಕಾರ್ಥಿಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಥೆಯ ಮುಖ್ಯಸ್ಥೆ ಹಾಗೂ ತರಬೇತಿದಾರರಾದ ಪವಿತ್ರ ಹೂಗಾರ ಅವರು 120 ಮಹಿಳೆಯ–



ರಿಗೆ ತರಬೇತಿ ನೀಡಿ ಉದ್ಯೋಗ ಅವಕಾಶ ಕಲ್ಪಿಸುವ ಕಾರ್ಯ ಶ್ಲಾಘನೀಯವಾಗಿದ್ದು ಇಂತಹ ಕೆಲಸಕ್ಕೆ ಸದಾ ನಮ್ಮ ಬೆಂಬಲ ಇರುತ್ತದೆ, ಚುನಾವಣೆ ಸಂದರ್ಭದಲ್ಲಿ ನಾನೇ ಪ್ರಚಾರ ಭಾಷಣದಲ್ಲಿ ಮಾತನಾಡಿದ್ದೆ. ಮಹಿಳೆಯರಿಗೆ ಸ್ವಂತ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಕನಿಷ್ಠ 2 ಸಾವಿರ ಮಹಿಳೆಯರ ಉದ್ಯೋಗ ಸೃಷ್ಟಿಸಲು ಗಾರ್ಮೆಂಟ ಮಾಡುವದಾಗಿ ಹೇಳಿದ್ದೆ ಆದರೆ ನಮ್ಮ ತಾಲೂಕಿನ ಮಹಿಳೆಯರಿಗೆ ಅನುಕೂಲ ಆಗುವ ಉದ್ಯೋಗ ಅವಕಾಶ ದೊರೆಯುವಂತಹ ಕೆಲಸ ಮಾಡಿದ ಪವಿತ್ರ ಹೂಗಾರ ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ಮಹಿಳೆಯರಿಗೆ ತರಬೇತಿ ನೀಡಿ ಸ್ವಾವಲಂಭಿ ಬದುಕು ಸಾಗಿಸಲು ದಾರಿದೀಪವಾಗಲಿ ಎಂದರು, ಇಂದಿನ ಸ್ರ್ಪರ್ಧಾತ್ಮಕ ಯುಗದಲ್ಲಿ ಎಲ್ಲ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದ ಮಹಿಳೆ ಪುರುಷರಿಗೆ ಸಮಾನವಾಗಿ ಉನ್ನತ ಹುದ್ದೆ ಹಾಗೂ ಪದವಿಯನ್ನು ಪಡೆದು ಸಮರ್ಥವಾಗಿ ನಿಭಾಯಿಸಿ ಪುರುಷ ಪ್ರಧಾನ ಸಮಾಜದಲ್ಲಿ ಸಮಾನತೆ ಸಾರಿದ ಮಹಿಳೆಯರು ಮುಂದಿನ ದಿನಗಳಲ್ಲಿ 33 ಪರ್ಸೆಂಟ ಮೀಸಲಾತಿ ಜಾರಿಯಾದರೆ ಮಹಿಳೆಯರಿಗೆ ಅಧಿಕಾರ ಅಡುಗೆ ಮನೆಗೆ ಹುಡುಕಿಕೊಂಡು ಬರಲಿದೆ ಎಂದರು.

ಈ ಸಂದರ್ಭದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಮುರುಘರಾಜೇಂದ್ರ ಸ್ವಾಮೀಜಿಗಳು ಸಿದ್ದರಾಮೇಶ್ವರ ಗುರುಮಠ ಯರಡೋಣಿ, ಹಾಗೂ ಸಿದ್ದಲಿಂಗ ಮಹಾಸ್ವಾಮಿಗಳು ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಶಾಖಾಮಠ ಲಿಂಗಸಗೂರು, ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ ಬಯ್ಯಾಪೂರ, ಡಾ.ರುದ್ರಗೌಡ ಪಾಟೀಲ, ಎಂ.ಪಿ ಸದಾನಂದ ನಿರ್ದೇಶಕರ ಜನ ಶಿಕ್ಷಣ ಸಂಸ್ಥೆ ರಾಯಚೂರ, ಮಾಜಿ ಪುರಸಭೆ ಅಧ್ಯಕ್ಷೆ ಸುನಿತಾ ಪರಶುರಾಮ ಕೆಂಭಾವಿ, ಸಂಗಮೇಶ ವಸ್ತ್ರದ, ಪವಿತ್ರ ಹೂಗಾರ ಕಾರ್ಯಕ್ರಮ ಸಂಯೋಜಕರು, ಸೇರಿದಂತೆ ಅನೇಕ ಗಣ್ಯರು ಹಾಗೂ ಕಲಿಕಾರ್ಥಿಗಳು ಸೇರಿದಂತೆ ಇದ್ದರು.

## ಸಾಹಿತ್ಯ ಸಿಂಚನ

ಮಾಸದ ನೆನಪು
ಮೈಲುಗಟ್ಟಲೆ ಪ್ರೀತಿ ಹೊತ್ತು ಸಾಗಿತ್ತು
ಬಂಧ ಸಂಬಂಧಗಳ ಗಟ್ಟಿಗೊಳಿಸಿತ್ತು
ಸಿಹಿ ಕಹಿ ಸುದ್ದಿಗಳ ಮನೆ ಮನಕೆ ಮುಟ್ಟಿಸಿ
ಒಲವ ಭಾವನೆಗಳನ್ನು ಹೃದಯಕೆ ಬಿತ್ತರಿಸಿ//

ಮಾಸದ ನೆನಪು ಅಂಚೆಯ ನೆನಪು
ಸ್ಮೃತಿಪಟಲದಲ್ಲಿ ಹಸಿರಾಗಿ ಉಳಿದ ನೆನಪು
ಪತ್ರ ಬರೆಯುವುದು, ಓದುವುದೇ ಒಂದು ಸಂಭ್ರಮ
ಓಣಿಗಳಲ್ಲಿ ತಿರುಗಿ ಹಂಚುವುದೇ ಸಡಗರ//

ಅದೆಷ್ಟು ಸೊಗಸಾಗಿತ್ತು ಅಂದಿನ ದಿನಗಳು
ತಡವಾಗಿ ಸುದ್ದಿಗಳು ಮುಟ್ಟುತ್ತಿದ್ದರೂ
ಗಟ್ಟಿಯಾಗಿದ್ದವು ನೆಂಟರ ನಡುವಿನ ಸಂಬಂಧಗಳು
ಪತ್ರ ಬರುವುದ ಕಾಯುವುದರಲ್ಲಿ ಏನೋ ಖುಷಿ//

ಅಂಚೆ ಮನುಷ್ಯನಿಗೆ ಸಂಸ್ಕಾರ ಕಲಿಸಿತ್ತು
ಕಾಯುವ ಸಹನೆ ತಾಳ್ಮೆಯನ್ನು ಕಲಿಸಿತ್ತು
ಭಾವನೆಗಳನ್ನು ಹಂಚಿಕೊಳ್ಳುವ ಸಂತಸವಿತ್ತು
ಎಷ್ಟು ವರ್ಷಗಳಾದರೂ ಪ್ರೇಮಿಗಳ ಬಂಧ ಮು-
ರಿಯದಾಗಿತ್ತು//

ಇಂದು ಗಂಟೆಗಟ್ಟಲೆ ಮಾತಾಡಿದರೂ
ಉಳಿದಿಲ್ಲ ಮೊದಲಿನ ಸ್ವಾದ ಸಂಬಂಧಗಳಲ್ಲಿ
ಕ್ಷಣ ಕ್ಷಣಕ್ಕೂ ಮುರಿದು ಬೀಳುತ್ತಿವೆ ಬಂಧಗಳು
ಕೋಪ, ಅಹಂ, ಪವಿತ್ರ ಬಂಧನವನ್ನು ಮರೆಸಿವೆ//

ಶ್ರೀಮತಿ ಕವಿತಾ ಹಿರೇಮಠ ಕವಿತಾಳ

# ನಮ್ಮ ಸರಕಾರಿ ಶಾಲೆಯ ಬಗ್ಗೆ ಅಪಪ್ರಚಾರ ಮಾಡಿರುವುದು ನಮ್ಮ ಮನಸಿಗೆ ನೋವುತಂದಿದೆ ಮುಖ್ಯೋಪಾಧ್ಯಾಯನಿ ಮಹಾದೇವಮ್ಮ

❑ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಡಿ,3:– ನಿವೃತ್ತಿ ಅಂಚಿನಲ್ಲಿ ಮುಖ್ಯಗುರುಗಳು ಅಳಿವಿನಂಚಿನಲ್ಲಿ ಮಕ್ಕಳ ಭವಿಷ್ಯ ಎಂಬ ಶೀರ್ಷಿಕೆಯಡಿಯಲ್ಲಿ ದಿನಾಂಕ 29/11/2025 ರಂದು ಪ್ರಾದೇಶಿಕ ದಿನಪತ್ರಿಕೆಯೊಂದರಲ್ಲಿ ಪ್ರಕಟವಾದ ವರದಿ ನಮ್ಮ ಮನಸಿಗೆ ಬಹಳ ನೋವನ್ನುಂಟು ಮಾಡಿದೆ. ಎಂದು ಬಳಗಾನೂರಿನ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯನಿ ಮಹಾದೇವಮ್ಮರವರು ಮನದ ದುಖವನ್ನು ತೋಡಿಕೊಂಡರು.**

ಮಂಗಳವಾರ ಸಂಜೆ ಪಟ್ಟಣದ ಸರಕಾರಿ ಪ್ರೌಢಶಾಲೆಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಸತ್ಯಕ್ಕೆ ದೂರವಾದ ವಿಷಯವಾಗಿದೆ. ನಮ್ಮ ಶಾಲೆಯ ವಿದ್ಯಾರ್ಥಿಗಳು ಓದಿನಲ್ಲಿ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಾಲೂಕಾ, ಜಿಲ್ಲಾ, ವಿಭಾಗಮಟ್ಟದಲ್ಲಿ ಸಾಧನೆಮಾಡುವ ಮೂಲಕ ಶಾಲೆಯ,ಊ-ರಿನ ಕೀರ್ತಿಯನ್ನು ಎಲ್ಲೆಡೆ ಪಸರಿಸಿದ್ದಾರೆ. ಒಬ್ಬ ಜಾಣವಿದ್ಯಾರ್ಥಿಯ ಆಧಾರದ ಮೇಲೆ ಇಡೀ ಶಾಲೆಯ ಗುಣಮಟ್ಟವನ್ನು ಹೇಗೆ ನಿರ್ಧರಿಸಲಾಗುವುದಿಲ್ಲವೋ ಅದರಂತೆ ಒಬ್ಬ ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಯ ಆಧಾರದಿಂದ ಇಡೀ ಶಾಲೆಯ ಗುಣಮಟ್ಟವನ್ನೂ ನಿರ್ಧರಿಸಲಾಗದು.

ಒಂದುಶಾಲೆಯ ಸಮಗ್ರ ಸ್ಥಿತಿಗತಿ,



ಗುಣಾವಗುಣಗಳನ್ನು ತಳಸ್ಪರ್ಶಿ ಅಧ್ಯಯನದ ನಂತರ ನಿರ್ಧರಿಸಬಹುದೇ ವಿನಹ ಏಕಾಏಕಿ ನಿರ್ಧರಿಸಲಾಗದು.ನಾನೂ ಸರಕಾರಿಶಾಲೆಯಲ್ಲೇ ಓದಿ ಮುಖ್ಯೋಪಾಧ್ಯಾಯನಿಯಾಗಿದ್ದೇನೆ ಸರಕಾರಿ ಶಾಲೆಗಳೆಂದರೆ ಸಾಮಾನ್ಯವಾದವುಗಳಲ್ಲ ಅವುಗಳ ಅಪಪ್ರಚಾರ ಸಲ್ಲದು ಎಂದರು. ಶಿಕ್ಷಕರ ನೌಕರಿಗೆ ನಿವೃತ್ತಿ ಇರುತ್ತದೆಯೇ ವಿನಹ ಶಿಕ್ಷಕರಿಗಲ್ಲ,ಇಲ್ಲಿ ಬಹುತೇಕ ಬಡವರ ಮಕ್ಕಳು ಅಭ್ಯಸಿಸಲು ಬರುತ್ತಾರೆ ಈ ರೀತಿ ಅಪಪ್ರಚಾರ ಮಾಡಿದರೆ ಮುಂದೆ ಬಡಮಕ್ಕಳು ಓದುವದು ಬಹಳ ಕಷ್ಟಸಾಧ್ಯವಾಗುತ್ತದೆ. ಹೀಗಾಗಿ ಬರೆಯುವ ಮುನ್ನ ಅರಿಯುವುದು ಸೂಕ್ತ ಅರೆಬರೆ ಮಾಹಿತಿ ಮೇರೆಗೆ ಬರೆದು ಮಕ್ಕಳ ಭವಿಷ್ಯವನ್ನು ಕತ್ತಲುಮಾಡುವುದು ಸರಿಯಲ್ಲ ಎಂದರು.

ನಂತರ ಮಾತನಾಡಿದ ಶಾಲಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಬಸವರಾಜ ದೋತರಬಂಡಿ ಈ ರೀತಿ ಶಾಲೆಯ ಮುಖ್ಯಸ್ತರ ಪರವಾನಗೆ ಪಡೆಯದೆ ಶಾಲಾ ಕೊಠಡಿಗಳ ಒಳಗೋಗಿ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ತೆಗೆದು ಪತ್ರಿಕೆಯಲ್ಲಿ ಪ್ರಕಟಿಸಿ ಅವರ ಮತ್ತು ಶಾಲೆಯ ತೇಜೋವಧೆ ಮಾಡುವುದು ಸರಿಯಲ್ಲ ಎಂದರು. ಉಪಾಧ್ಯಕ್ಷ ಖಯಿಂಮ್ ಮಾತನಾಡಿ ಇಲ್ಲಿ ಪತ್ರಿಕೆಯಲ್ಲಿ ಪ್ರಕಟವಾದಂತಹ ದುಸ್ಥಿತಿ ಇಲ್ಲ ಬಾವಿಯ ದಂಡೆಗೆ ಕುಳಿತು ನೀರಿನ ಆಳ ಪರೀಕ್ಷಿಸಿದಂತಾಗಿದೆ.ವರದಿ ಪ್ರಕಟಿಸುವ ಮುನ್ನ ಆಳವಾದ ಅಧ್ಯಯನ ಮುಖ್ಯ ನಮ್ಮೂರ ಶಾಲೆಯ ಬಗ್ಗೆ ಇಲ್ಲಸಲ್ಲದ ಆರೋಪಮಾಡಿ ಬರೆಯುವುದು ತರವಲ್ಲ ಸುತ್ತಲಿನ ಹಳ್ಳಿಗಳ ಮಕ್ಕಳ ಭವಿಷ್ಯಕ್ಕೆ ಈ ಶಾಲೆ ದಾರಿದೀಪವಾಗಿದೆ ಎಂದರು.

ಸದಸ್ಯ ಬಸವರಾಜ ಜವಳಗೇರಾ ಶಾಲೆಯ ಒಳಗಡೆ ಹೋಗಿ ವಿದ್ಯಾರ್ಥಿಳನ್ನು ಪರೀಕ್ಷಿಸಿದ್ದೇ ಮೊದಲ ತಪ್ಪು,ಅವರ ಭಾವಚಿತ್ರಗಳನ್ನು ಪತ್ರಿಕೆಯಲ್ಲಿ ಹಾಕಿದ್ದು ಮತ್ತೊಂದು ತಪ್ಪು ಈಗ ಆ ವಿದ್ಯಾರ್ಥಿಗಳು ಶಾಲೆಗೆ ಹೋಗುವುದಿಲ್ಲವೆಂದು ಹೇಳುತ್ತಿವೆ ಇದಕ್ಕೆ ಯಾರು ಜವಬ್ದಾರಿ ಮಕ್ಕಳ ಮನದ ಮೇಲೆ ದುಷ್ಪರಿಣಾಮ ಬೀರಿದೆ ಈ ರೀತಿ ಆರೋಪಮಾಡಿದರೆ ಉತ್ತಮವಾಗಿರುವ ಸರಕಾರಿ ಶಾಲೆಗಳೂ ಮುಚ್ಚಿಬಿಡುತ್ತವೆ,ಈ ರೀತಿಮಾಡುವುದು ಸರಿಯಲ್ಲ ಎಂದರು.

ಶಾಲೆಯ ಗಣಿತ ಶಿಕ್ಷಕರಾದ ಮಹ್ಮದ್ ರಫಿಯುದ್ದೀನ್ ಮಾತನಾಡಿ ಪತ್ರಿಕೋಧ್ಯಮ ನಾಲ್ಕನೆಯ ಅಂಗ ಈ ರೀತಿ ಬರೆದು ಸರಕಾರಿ ಶಾಲೆಯ ಮಕ್ಕಳ ತೇಜೋವಧೆ ಮಾಡುವುದು ಸರಿಯಲ್ಲ, ಈ ಶಾಲೆ ಈಗ 25 ವರ್ಷಗಳನ್ನು ಪೂರೈಸಿ ಬೆಳ್ಳಿಹಬ್ಬದ ಅಂಚಿನಲ್ಲಿದೆ ಪ್ರಗತಿಯಿಲ್ಲದೆ ಇಷ್ಟುವರ್ಷ ಸಾಗಿಬರಲು ಸಾಧ್ಯವಿಲ್ಲ. ಇಲ್ಲಿ ಎಲ್ಲಾ ವಿದ್ಯಾರ್ಥಿಗಳು ಆಟೋಟ,ಸಾಂಸ್ಕೃತಿ-ಕ,ವಿದ್ಯಾರ್ಜನೆಯಲ್ಲೂ ಮುಂಚೂಣಿಯಲ್ಲಿದ್ದಾರೆ,

ಉತ್ತಮ ಗ್ರಂಥಾಲಯವಿದೆ ಅದನ್ನ-ರಿಯದೆ ಈ ರೀತಿ ವರದಿಮಾಡಿರುವುದು ದುರದೃಷ್ಟಕರವಾದದ್ದೆಂದು ಕಳವಳವ್ಯಕ್ತಪಡಿಸಿದರು.

ಶಾಲೆಯ ವಿದ್ಯಾರ್ಥಿಗಳು ಮಾತನಾಡಿ ಇಲ್ಲಿ ಎಲ್ಲಾ ಶಿಕ್ಷಕರು ಉತ್ತಮ ರೀತಿಯಲ್ಲಿ ಮನದಟ್ಟಾಗುವಂತೆ ಪಾಠಮಾಡುತ್ತಾರೆ ಇಲ್ಲಿ ಯಾವುದೇರೀತಿಯ ತೊಂದರೆಗಳಾಗಿಲ್ಲ ಇದನ್ನರಿಯದೆ ನಮ್ಮ ಶಾಲೆಯ ಬಗ್ಗೆ ಶಿಕ್ಷಕರ ಬಗ್ಗೆ ಅಪಪ್ರಚಾರ ಮಾಡಬೇಡಿ ಎಂದು ವಿನಂತಿಸಿಕೊಂಡರು. ಈ ಸಂದರ್ಭದಲ್ಲಿ ಶಾಲಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಬಸವರಾಜ ದೋತರಬಂಡಿ, ಉಪಾಧ್ಯಕ್ಷರಾದ ಖಯಿಂಮ್, ಸದಸ್ಯರಾದ ಬಸವರಾಜ ಜವಳಗೇರಾ, ಮ-ರಿಸ್ವಾಮಿ ಬಾಂಬೆ,ಖಾಜಪ್ಪ ದೇವರಮನಿ, ಹನುಮಂತ,ಮತ್ತು ಶಿಕ್ಷಕರಾದ ಮಹ್ಮದ್ ರಫಿಯುದ್ದೀನ್, ಸುನೀತಾ,ಸಂಗೀತಾ ಪಾಟೀಲ್,ಶ್ವೇತಾ ಜೋಶಿ, ಕರಣಿಕರಾದ ಶ್ರೀನಿವಾಸ ಕುಲಕರ್ಣಿ, ಬಸವರಾಜ ಪೂಜಾರಿ, ಕಾರ್ತಿಕ್ ಸಾಲವಾಡಗಿ, ಸುರೇಶ ದಿದ್ದಿಗಿ,ಸೇರಿದಂತೆ ಹಲವರಿದ್ದರು.

### ಡಾ.ಬಿ.ಆರ್.ಅಂಬೇಡ್ಕರ್ ಮಹಾಪರಿನಿರ್ವಾಣದಿನಾಚರಣೆಯಲ್ಲಿ ಭಾಗಿಯಾಗಲು ಮನವಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್: (ಕರ್ನಾಟಕ ವಾರ್ತೆ): ಇಲ್ಲಿನ ಸಮಾಜ ಕಲ್ಯಾಣ ಇಲಾಖೆಯಿಂದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪ-ರಿನಿರ್ವಾಣ ದಿನಾಚರಣೆಯ ಅಂಗವಾಗಿ ಡಿಸೆಂಬರ್ 06ರ ಬೆಳಿಗ್ಗೆ 9 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು,**

ಸಾರ್ವಜನಿಕರು ಮತ್ತು ಎಲ್ಲಾ ಗಣ್ಯ ಮಾನ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಾನ್ವಿ ವಿಧಾನಸಭಾ ಕ್ಷೇತ್ರದ 4 ಶಾಲೆಗಳು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಮೇಲ್ದರ್ಜೆಗೆ–ಹಂಪಯ್ಯ ನಾಯಕ

❑ ನೈಜ್ಯ ದೆಸೆ ನ್ಯೂಸ್

**ಸಿರವಾರ: ಸಿರವಾರ ತಾಲೂಕಿನ ಕುರುಕುಂದಾ ಸರ್ಕಾರಿ ಶಾಲೆ ಸೇರಿ ಮಾನ್ವಿ ವಿಧಾನಸಭಾ ಕ್ಷೇತ್ರದ 4 ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಪಂಡಳಿಯ ಅನುದಾನದಡಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ ಪತ್ರಿಕೆಗೆ ತಿಳಿಸಿದರು.**

ಅವರು ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿ ನಮ್ಮ ರಾಜಕೀಯ ಗುರುಗಳಾದ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವರಾದ ಎನ್. ಎಸ್.ಬೋಸರಾಜು ಅವರು ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುವ ದೃಷ್ಟಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಡಿ ಸಿರವಾರ ತಾಲೂಕಿನ ಕುರಕುಂದ, ಮಾನ್ವಿ ತಾಲೂಕಿನ ಚೀಕಲಪರ್ವಿ, ತಡಕಲ್ ಹಾಗೂ ಮಾನ್ವಿ ನಗರದ ನಮಾಜಗೇರಾ ಗುಡ್ಡ ಶಾಲೆಗಳನ್ನು ಉನ್ನತೀಕರಿಸಿ ಈ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ 2025 26 ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಮೇಲ್ದರ್ಜೆಗೇರಿಸಲಾಗಿದ್ದು ಕ್ಷೇತ್ರದ ಬಡ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುಬೇಕೆಂದು ಸಲಹೆ ನೀಡಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಜ್ಞಾನ ಲಹರಿ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ



❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಸಂಪನ್ಮೂಲ ಕೇಂದ್ರದ ವತಿಯಿಂದ ಜ್ಞಾನ ಲಹರಿ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.**

ಕಾರ್ಯಕ್ರಮವನ್ನು ಶ್ರೀ ಚನ್ನಬಸವೇಶ್ವರ ಆರೂಢ ಮಠದ ಅಯ್ಯಣ್ಣ ತಾತನವರು ಉದ್ಘಾಟಿಸಿದರು. ಶಿಕ್ಷಣ ಸಂಂ-ಯೋಜಕರಾದ ರಾಜನಗೌಡ ಕೋಳೂರು ಅವರು ಮಾತನಾಡಿ ಈ ಪ್ರತಿಭಾ ಕಾರಂಜಿ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಯನ್ನು ಅನಾವರಣ ಮಾಡಲು ಸೂಕ್ತ ವೇದಿಕೆಯಾಗಿದೆ. ಕಳೆದ ವರ್ಷ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ಗಲಗ ಗ್ರಾಮದ ವಿದ್ಯಾರ್ಥಿಗಳು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಪ್ರಶಸ್ತಿ ಪಡೆದಿದ್ದಾರೆ. ಅದೇ ರೀತಿ ಅವಕಾಶವನ್ನು ಬಳಸಿಕೊಂಡು ಕ್ರಿಯಾಶೀಲರಾಗಬೇಕೆಂದು ಸಲಹೆ ನೀಡಿದರು.

ಪ್ರತಿಭಾ ಕಾರಂಜಿಯಲ್ಲಿ ಭಾಷಣ, ಜಾನಪದ ಗೀತೆ, ನೃತ್ಯ, ಕಥೆ, ಚಿತ್ರ ಕಲೆ, ಧಾರ್ಮಿಕ ಪಠಾಣ್, ಆಶುಭಾಷಣ, ವೇಷಭೂಷಣ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಿತು. ಸ್ಪರ್ಧೆಯಲ್ಲಿ ಎರಡು ಪ್ರೌಢ ಶಾಲೆಗಳು, 8 ಹಿರಿಯ ಪ್ರಾಥಮಿಕ ಶಾಲೆಗಳು, 12 ಕಿರಿಯ ಪ್ರಾಥಮಿಕ ಶಾಲೆಗಳು ಸೇ-ರಿದಂತೆ ಒಟ್ಟು 20ಕ್ಕೂ ಹೆಚ್ಚು ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.ಬಳಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪದಕ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ದುರ್ಗಪ್ಪ ಗೌಡ ಮತ್ತು ಗ್ರಾಮ ಪಂಚಾಯಿತಿ ಸದಸ್ಯರು, ತಾಲೂಕಿನ ಸಂಪನ್ಮೂಲ ವ್ಯಕ್ತಿಗಳಾದ ವೆಂಕಟೇಶ, ಮನೋಹರ್ ಶಾಸ್ತ್ರೀ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ನಿಂಗಪ್ಪ ಮಾಲೀ, ಶಾಲೆಯ ಆಡಳಿತ ಮಂಡಳಿ ಅಧಿಕಾರಿಗಳಾದ ವೀರಭದ್ರಪ್ಪ ಹೇರೂರು, ವಿವಿಧ ಶಾಲೆಯ ಶಿಕ್ಷಕರು

# ತುಂಗಭದ್ರಾ ನೀರಾವರಿ ಕಾರ್ಮಿಕರ ಬೇಡಿಕೆಗಳು: ಮನವಿ ಸಲ್ಲಿಕೆ

**ಮಾನ್ವಿ: ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ಉಪ ವಿಭಾಗದ ಸಮಿತಿಯು ಮಾನ್ವಿಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿ ಸಲ್ಲಿಸುವ ಮೂಲಕ ಪ್ರತಿಭಟನೆ ನಡೆಸಿತು. ಕಾರ್ಮಿಕರಿಗೆ ಉದ್ಯೋಗ ಭದ್ರತೆ ಮತ್ತು ವರ್ಷಪೂರ್ತಿ ಕೆಲಸ ನೀಡಬೇಕೆಂಬುದು ಇವರ ಪ್ರಮುಖ ಒತ್ತಾಯವಾಗಿದೆ.**

ಯರಮರಸ್ ವೃತ್ತದ ಸಿಂಧನೂರು, ಸಿರಿವಾರ್ ಮತ್ತು ಯರಮರಸ್ ವಿಭಾಗದ ಎಲ್ಲಾ ಉಪ ವಿಭಾಗದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಜೂನ್ ತಿಂಗಳಿನಿಂದ ಬಾಕಿ ಇರುವ ವೇತನ, ಪಿಎಫ್ ಮತ್ತು ಇಎಸ್ಐ ಅನ್ನು ತಕ್ಷಣ ಪಾವತಿಸಬೇಕು ಎಂದು ಸಂಘವು ಆಗ್ರಹಿಸಿತು. ಇದರ ಜೊತೆಗೆ, ಏಪ್ರಿಲ್‌ನಿಂದ ಹೆಚ್ಚಳವಾಗಿರುವ ತುಟ್ಟಿ ಭತ್ಯೆ (ಆಂ) ಯನ್ನು ತಕ್ಷಣ ಕಾರ್ಮಿಕರ ಖಾತೆಗೆ ಜಮಾ ಮಾಡಬೇಕು ಎಂದು ಒತ್ತಾಯಿಸಲಾಯಿತು. ಕಾರ್ಮಿಕರಿಗೆ ಪ್ರತಿ ತಿಂಗಳು ವೇತನ, ಪಿಎಫ್, ಇಎಸ್ಐ ಪಾವತಿಸದ ಗುತ್ತಿಗೆದಾರರ ಗುತ್ತಿಗೆ




ಒಪ್ಪಂದವನ್ನು ರದ್ದುಪಡಿಸಿ, ಅವರನ್ನು ಕಪ್ಪು ಪಟ್ಟಿಗೆ (Blacklist) ಸೇ-ರಿಸಬೇಕು ಎಂದು ಬೇಡಿಕೆ ಇಡಲಾಗಿದೆ. ಗುತ್ತಿಗೆ ಪದ್ಧತಿಯಿಂದ ಕಾರ್ಮಿಕ-ರಿಗೆ ಮತ್ತು ನಿಗಮಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಲು, ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಿ, ನೇರ ಪಾವತಿ (Direct Pay-ment) ಪದ್ಧತಿಗೆ ಶಿಫಾರಸು ಮಾಡಬೇಕು ಎಂದು ಸಂಘವು ಮನವಿ ಮಾಡಿದೆ. ಕಾಲುವೆ ಮೇಲೆ ಕೆಲಸ ಮಾಡುವವರಿಗೆ ಸಮವಸ್ತ್ರ ಮತ್ತು ಐಡಿ ಕಾರ್ಡ್ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಬೇಕು.

ಹಾಗೂ ಕಚೇರಿ/ಕ್ಯಾಂಪ್ ಕಾರ್ಮಿಕ-ರಿಗೆ ತಿಂಗಳಪೂರ್ತಿ ವೇತನ ನೀಡಬೇಕು ಮತ್ತು ಕಾನೂನು ಬಾಹಿರವಾಗಿ 26 ದಿನಗಳ ವೇತನ ಪಾವತಿ ಮಾಡುವುದನ್ನು ನಿಲ್ಲಿಸಬೇಕು ಎಂದೂ ಕಾರ್ಮಿಕರು ಒತ್ತಾಯಿಸಿದ್ದಾರೆ. ಕಾರ್ಮಿಕರ ಕುಟುಂಬಗಳ ಗೌರವಯುತ ಜೀವನಕ್ಕಾಗಿ ಈ ಎಲ್ಲಾ ಬೇಡಿಕೆಗಳನ್ನು ಶೀಘ್ರದಲ್ಲಿ ಈಡೇರಿಸುವಂತೆ ಸಂಘವು ಆಗ್ರಹಿಸಿತು. ಸಂಘದ ಅಧ್ಯಕ್ಷ ಕೆ. ನಾಗಲಿಂಗಸ್ವಾಮಿ, ಉಪ ವಿಭಾಗದ ಅಧ್ಯಕ್ಷ ಬಸಲಿಂಗಪ್ಪ ಜಂಬಲದಿನ್ನಿ, ಕೇಂದ್ರ ಸಮಿತಿ ಖಜಾಂಚಿ ಜಲೀಲ್ ಪಾಷಾ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

# ಬೆಂಬಲಿಗರ ಜೊತೆ ಮಾತಾಡಿಸುವುದು ಬಿಟ್ಟು ನೇರವಾಗಿ ಬನ್ನಿ ಹೂಲಗೇರಿಗೆ ಸವಾಲ್ ಗೋವಿಂದ ನಾಯಕರಿಗೆ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ ಗೊತ್ತಿಲ್ಲ: ಪಾಮಯ್ಯ ಮುರಾರಿ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಮಾಜಿ ಶಾಸಕರು ಬಿಜೆಪಿ ಮೂಲದಿಂದ ಬಂದಿರುವವರನ್ನು ಪಕ್ಕಕ್ಕೆ ಇಟ್ಟುಕೊಂಡು, ಬಿಜೆಪಿ ಪಕ್ಷದಿಂದ ಬಂದವರಿಗೆ ಆದ್ಯತೆ ಕೊಟ್ಟಿದ್ದಾರೆ, ಅವರಿಗೆ ಕಾಂಗ್ರೆಸ್ ಪಕ್ಷದ ಸಿದ್ಧಾಂತದ ಬಗ್ಗೆ ಗೊತ್ತಿಲ್ಲ, ನಮ್ಮ ಮೇಲೆ ಸುಳ್ಳು ಆಪಾದನೆ ಮಾಡುವುದನ್ನು ಬಿಡಬೇಕು ನಿಮಗೆ ನೈತಿ-ಕತೆ ಇದ್ದರೆ ನೇರವಾಗಿ ಬನ್ನಿ ಒಂದೇ ವೇದಿಕೆಯಲ್ಲಿ ಸೇರಿ ಚರ್ಚಿಸಲು ನಾವುಗಳು ಸಿದ್ದರಾಗಿದ್ದೇವೆ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ ಹೇಳಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದವರೆಂದು ಹೇಳಿಕೊಳ್ಳುವ ಕೆಲವರು ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಬಗ್ಗೆ ಹಗುರವಾಗಿ




ಮಾತನಾಡುವುದನ್ನು ನಿಲ್ಲಿಸಬೇಕು. ನಾವುಗಳೂ ಪಕ್ಷದ ನಿಷ್ಠಾವಂತ ಕಾರ್ಯಕರ್ತರೇ ಆಗಿದ್ದೇವೆ ನಮಗೆ ಎಚ್ಚರಿಕೆ ಇದೆ. ಅದಕ್ಕಾಗಿಯೇ ಎಚ್ಚರಿಕೆಯಿಂದ ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡುತ್ತಿದ್ದೇವೆ. ಹೂಲಗೇರಿ ಸಂಘ ಬಿಟ್ಟಿದ್ದೇವೆ ಹೊರತು ಕಾಂಗ್ರೆಸ್ ಪಕ್ಷ ಬಿಟ್ಟಿಲ್ಲ: ಶಾಸಕ 2023ರ ಚುನಾವಣೆಯಲ್ಲಿ ನಾವುಗಳು ಅತ್ಯಂತ ಪ್ರಾಮಾಣಿಕತೆಯಿಂದ ದುಡಿದಿದ್ದೇವೆ. ಡಿ.ಎಸ್.ಹೂಲಗೇರಿಯವರ ಸಂಘ ಬಿಟ್ಟಿದ್ದೇವೆಯೇ ಹೊರತು ನಾವು ಕಾಂಗ್ರೆಸ್ ಪಕ್ಷವನ್ನು ಬಿಟ್ಟಿಲ್ಲ. ಪಕ್ಷದಲ್ಲಿಯೇ ಇದ್ದು ಸಂಘಟನೆಯಲ್ಲಿ ತೊಡಗಿದ್ದೇವೆ.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಪಾಟೀಲ್ ಕರಡಕಲ್ ಮಾತನಾಡಿ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರೆಂದು ಕೇಳಿಕೊಳ್ಳುವವರು ಪದೇ ಪದೇ ಬಯ್ಯಾಪೂರರ ಬಗ್ಗೆ ಮಾತನಾಡುವುದನ್ನು ನಿಲ್ಲಿಸಬೇಕು. ಅವರು ಕೊಡುವ ಎಚ್ಚರಿಕೆಗೆ ನಾವು ಡೊಂಟ್‌ಕೇರ್ ಎಂದು ಎಚ್ಚರಿಸಿದರು. ಪಕ್ಷಕ್ಕೆ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದವ-ರಿಗೆ ಗೌರವ ಸಿಗದೇ ಇರುವ ಸಂದರ್ಭದಲ್ಲಿ ಹೂಲಗೇರಿಯವರ ಸಂಘ ತೊರೆದು ಮಾಜಿ ಸಚಿವರ ಜೊತೆಗಿದ್ದೇವೆ. ಕಾಂಗ್ರೆಸ್ ಪದ ಮೂಲ ಕಾರ್ಯಕರ್ತರು ನಾವುಗಳು ಕ್ಷೇತ್ರದಲ್ಲಿ ಈ ಸಂಘಟನೆ ಕಾರ್ಯದಲ್ಲಿ ತೊಡಗಿರುವುದು ಅವ-ರಿಗೆ ಸಹಿಸಲು ಆಗುತ್ತಿಲ್ಲ. ಇದಕ್ಕಾಗಿ ಇಲ್ಲಸಲ್ಲದ ಆರೋಪ ಮಾಡುವಲ್ಲಿ ನಿರತರಾಗಿದ್ದಾರೆ. ಬಿಜೆಪಿ ಆರ್‌ಎಸ್ಎಸ್ ಮೂಲದಿಂದ ಬಂದವರು ಯಾವತ್ತೂ ಕಾಂಗ್ರೆಸ್ ತತ್ವ ಸಿದ್ಧಾಂತ.

ಜಾತ್ಯಾತೀತ ಮನೋಭಾವನೆ ಹೊಂದಲು ಸಾಧ್ಯವಿಲ್ಲ, ನಾವು ಪಕ್ಷದ ಹಿರಿಯರ ನಿರ್ದೇಶನದಂತೆ ಕ್ಷೇತ್ರದಲ್ಲಿ ಸಂಘಟನೆ ಮಾಡುತ್ತಿದ್ದೇವೆ ಎಂದರು. ಮಿಸಲು ಎನ್ನುವುದು ಕೆಲ ಸಮಾಜಗಳಿಗೆ ರಾಜಕೀಯವಾಗಿ ನೀಡುವ ಪ್ರಾತಿನಿಧ್ಯವೇ ಹೊರತು. ಪಟ್ಟಾಭಿಷೇಕವಲ್ಲ, ಕೇವಲ ಮೀಸಲಿರುವವರೇ ನಿಮಗೆ ಮತ ಹಾಕಿದ್ದಾರೆಯೇ. ಅದನ್ನು ಸರಿಯಾಗಿ ಅರ್ಥಮಾಡಿಕೊಂಡು ಮಾತನಾಡಬೇಕು. ಎ0ದು ಹಿರಿಯ ಮುಖಂಡ ಡಿ.ಜಿ. ಗುರಿಕಾರ ಮಾತನಾಡಿದರು. ಈ ಸಂದರ್ಭದಲ್ಲಿ ಗುಂಡಪ್ಪ ನಾಯಕ, ಅನೀಷಪಾಷ, ಮಲ್ಲಯ್ಯ, ಪ್ರಕಾಶ ಕುರಿ, ಜಗದೇಶ ಗೌಡ, ಶರಣಪ್ಪ ಹುನಕುಂಟಿ, ಈರಪ್ಪ ಸೇರಿದಂತೆ ಇದ್ದರು.

## ನೇಮಕಾತಿ ಪ್ರಕಟಣೆ

BVFCL ನೇಮಕಾತಿ 2025: 23 ಟೆಕ್ನಿಷಿಯನ್ ಟ್ರೈನಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬ್ರಹ್ಮಪುತ್ರ ವ್ಯಾಲಿ ಫರ್ಟಿಲೈಜರ್ ಕಾರ್ಪೊರೇಷನ್ ಲಿಮಿಟೆಡ್ ನವೆಂಬರ್ 2025 ರ BVFCL ಅಧಿಕೃತ ಅಧಿಸೂಚನೆಯ ಮೂಲಕ ಟೆಕ್ನಿಷಿಯನ್ ಟ್ರೈನಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದಿಬ್ರುಗಢ – ಅಸ್ಸಾಂ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಡಿಸೆಂಬರ್–2025 ರಂದು ಅಥ–ವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. BVFCL ನೇಮಕಾತಿ ಸಂಸ್ಥೆ ಬ್ರಹ್ಮಪುತ್ರ ವ್ಯಾಲಿ ಫರ್ಟಿಲೈಜರ್ ಕಾರ್ಪೊರೇಷನ್ ಲಿಮಿಟೆಡ್ ಪೋಸ್ಟ್ ಹೆಸರು ಟೆಕ್ನಿಷಿಯನ್ ಟ್ರೈನಿ ಖಾಲಿ ಹುದ್ದೆಗಳ ಸಂಖ್ಯೆ 23 ಹುದ್ದೆಗಳು ಅರ್ಹತೆ 12 ನೇ ತರಗತಿ, ಐಟಿಐ, ಡಿಪ್ಲೊಮಾ, ಬಿ.ಎಸ್ಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–ಡಿಸೆಂಬರ್–2025 https://bvfcljobs.eload.cloud/ Official Website: bvfcl.com ಕೊನೆಯ ದಿನಾಂಕ: 09–ಡಿಸೆಂಬರ್–2025

# ಸನ್ ರೈಸ್ ಕಾಲೇಜ್ ಸಿಂಧನೂರ್ ವತಿಯಿಂದ ರಾಷ್ಟ್ರೀಯ ವಕೀಲರ ದಿನ ಆಚರಣೆ

ನೈರುತ್ಯ ದೆಸೆ ನ್ಯೂಸ್

**ರಾಷ್ಟ್ರೀಯ ವಕೀಲರ ದಿನದ ಅಂಗವಾಗಿ ಇಂದು ಸಿಂಧನೂರು ತಾಲೂಕು ನ್ಯಾಯವಾದಿಗಳ ಸಂಘದ ಗೌರವಾನ್ವಿತ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಸನ್‌ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಡಿ ಫಾರ್ಮಸಿ ನರ್ಸಿಂಗ್ ಪ್ಯಾರ ಮೆಡಿಕಲ್ ಕಾಲೇಜು ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.**

ಈ ಕಾರ್ಯಕ್ರಮಕ್ಕೆ ನ್ಯಾಯಾಂಗ ಕ್ಷೇತ್ರದ ಗಣ್ಯರು ಹಾಗೂ ಶಿಕ್ಷಣ ವಲಯದ ಪ್ರತಿನಿಧಿಗಳು ಭಾಗಿಯಾಗಿ ಕಾರ್ಯಕ್ರಮವನ್ನು ಸುಂದರಗೊಳಿಸಿದರು. ಶ್ರೀ ಭೀಮನಗೌಡ, ಹಿರಿಯ ವಕೀಲರು ಅಧ್ಯಕ್ಷರು, ತಾಲೂಕು ನ್ಯಾಯವಾದಿಗಳ ಸಂಘ, ಸಿಂಧನೂರು ಜಗದೀಶ್ ಕುಮಾರ್, ನ್ಯಾಯವಾದಿಗಳು ಉಪಾಧ್ಯಕ್ಷರು, ಸಿಂಧನೂರು ದುರ್ಗೇಶ್ ತುರುವಿಹಾಳ, ಕಾರ್ಯದರ್ಶಿ, ತಾಲೂಕು ನ್ಯಾಯವಾದಿಗಳ ಸಂಘ , ಕುಮಾರಿ ಹೀನಾ ಅಮ್ರೀನ್, ಜಂಟಿ ಕಾರ್ಯದರ್ಶಿ, ನ್ಯಾಯವಾದಿಗಳ ಸಂಘ, ಸಿಂಧನೂರು ಚಂದ್ರಶೇಖರ್ ತುರುವಿಹಾಳ,




ಜಂಟಿ ಕಾರ್ಯದರ್ಶಿ, ಸಿಂಧನೂ–ರಿನಾ ಎಲ್ಲಾ ವಕೀಲರ ಪರವಾಗಿ ಸನ್‌ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ವತಿಯಿಂದ ಗೌರವಪೂರ್ವಕ ಸನ್ಮಾನ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಸನ್‌ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷರಾದ ಇರ್ಫಾನ್ ಕೆ ಅತ್ತರ್ ಮಾತನಾಡಿ, ಸಮಾಜದಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹಮ್ಮಿಕೊಂಡರು. ನ್ಯಾಯ ಮತ್ತು ಮೂಲಭೂತ ಮಾನವ ಹಕ್ಕುಗಳನ್ನು ರಕ್ಷಿಸುವಲ್ಲಿ ವಕೀಲರು ತೋರಿಸುವ ನಿಷ್ಠೆ, ಧೈರ್ಯ ಮತ್ತು ತ್ಯಾಗವನ್ನು ಮೆಚ್ಚುವುದರೊಂದಿಗೆ, ಸಮಾಜದಲ್ಲಿ ಕಾನೂನು ಜಾಗೃತಿ ಮೂಡಿಸುವುದು, ವಿಧಿ ವೃತ್ತಿಯ ಗೌರವವನ್ನು ಕಾಯ್ದುಕೊಳ್ಳುವುದು ಮತ್ತು ನ್ಯಾಯ ಎಲ್ಲ–ರಿಗೂ ಲಭ್ಯವಾಗುವಂತೆ ಮಾಡುವಲ್ಲಿ ವಕೀಲರ ಪಾತ್ರ ಅಮೂಲ್ಯವಾಗಿದೆ ಎಂದು ಹೇಳಿದರು.

ಅವರು ಎಲ್ಲಾ ವಕೀಲರಿಗೆ ವಕೀಲರ ದಿನದ ಹಾರ್ದಿಕ ಶುಭಾಶಯ ಹಾಗೂ ಧನ್ಯವಾದವನ್ನು ಸಲ್ಲಿಸಿದರು. ಈ ವೇಳೆ ಸನ್‌ರೈಸ್ ಸ್ಕೂಲ್ ಆಫ್ ನರ್ಸಿಂಗ್ ಪ್ರಾಚಾರ್ಯರಾದ ಲಾಜರ್ ಸಿರಿಲ್ ಜಿ ಮಾತನಾಡಿ: ಭಾರತದಲ್ಲಿ ಪ್ರತಿವರ್ಷ ಡಿಸೆಂಬರ್ 3 ರಂದು ರಾಷ್ಟ್ರೀಯ ವಕೀಲರ ದಿನ ಆಚರಿಸಲಾಗುತ್ತದೆ. ಈ ದಿನವು ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರ ಜನ್ಮದಿನವಾಗಿದ್ದು, ಅವರು ಒಬ್ಬ ಪ್ರತಿಷ್ಠಿತ ವಕೀಲರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಂವಿಧಾನ ತಜ್ಞರಾಗಿದ್ದರು. ನ್ಯಾಯ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ನಾಗರಿಕರ ಹಕ್ಕುಗಳ ರಕ್ಷಣೆಗೆ ಅವರು ನೀಡಿದ ಸೇವೆ ಅತ್ಯುನ್ನತ ಮತ್ತು ಆದರ್ಶಪ್ರಾಯವಾಗಿದೆ ಎಂದು ತಿಳಿಸಿದರು.

ಅವರು ಎಲ್ಲಾ ವಕೀಲರಿಗೆ ಹೃತ್ಪೂರ್ವಕ ವಕೀಲರ ದಿನದ ಶುಭಾಶಯವನ್ನು ಕೋರಿದರು ಇದೇ ಸಂದರ್ಭದಲ್ಲಿ ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಪದಾಧಿಕಾರಿಗಳು ಸರ್ವ ಸದಸ್ಯರು ವಕೀಲರ ಬಳಗ , ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಉಪನ್ಯಾಸಕರುಗಳು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪಸ್ಥಿತರಿದ್ದು ಯಶಸ್ವಿಗೊಳಿಸಿದರು.

# ತಾ. ವಕೀಲರ ಸಂಘದ ವತಿಯಿಂದ ವಕೀಲರ ದಿನಾಚರಣೆ ಕಾರ್ಯಕ್ರಮ

ನೈರುತ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ವಕೀಲರ ಸಂಘದ ಸಭಾಂಗಣದಲ್ಲಿ ನಡೆದ ವಕೀಲರ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶಿವರಾಜ .ವಿ. ಸಿದ್ದೇಶ್ವರ ಉದ್ಘಾಟಿಸಿ ಮಾತನಾಡಿ ಭಾರತ ದೇಶದ ಪ್ರಥಮ ರಾಷ್ಟ್ರಪತಿಗಳಾದ ಡಾ.ರಾಜೇಂದ್ರ ಪ್ರಸಾದ್ ರವರು ವಕೀಲರಾಗಿದ್ದರು ಅದ್ದರಿಂದ ಅವರ ಜನ್ಮದಿನವನ್ನು ವಕೀಲರ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ.**




ವಕೀಲರು ಹಾಗೂ ನ್ಯಾಯಾಧೀಶರು ದೇಶದ ಕಾನೂನು ಹಾಗೂ ಸಂವಿಧಾನದ ಜ್ಞಾನವನ್ನು ಹೊಂದುವುದು ಅಗತ್ಯವಾಗಿದೆ. ಜಗತ್ತಿನಲ್ಲಿ ಜ್ಞಾನ ಕಿಂತಲು ಮಿಗಿಲಾದದು ಯಾವುದು ಇಲ್ಲ ನ್ಯಾಯವಾದಿಗಳು ಕಾನೂನಿನ ಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು ತಮ್ಮಲ್ಲಿಗೆ ಬರುವ ಕಾಕ್ಷಿದರರಿಗೆ ನ್ಯಾಯವನ್ನು ಸಿಗುವಂತೆ ಮಾಡಿದಲ್ಲಿ ನಿಮ್ಮ ಹೇಸರು ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುತ್ತದೆ. ವಕೀಲರು ಕಾನೂನಿನ ಜ್ಞಾನದ ಜೋತೆಗೆ ಬದುಕಿನ ಜ್ಞಾನವನ್ನು ಪಡೆದುಕೊಂಡಲ್ಲಿ ಜೀವನದಲ್ಲಿ ಪ್ರಬುದ್ದರಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಎಂದು ತಿಳಿಸಿದರು. ಸಿವಿಲ್ ನ್ಯಾಯಾಧೀಶರಾದ ಆನಂದ ಹೆಚ್.ಕಣ್ಣೂರ್ ಮಾತನಾಡಿ. ವಕೀಲ ವೃತ್ತಿ ಅತ್ಯಂತ ಶ್ರೇಷ್ಟವಾದ ವೃತ್ತಿಯಾಗಿದ್ದು .ದೇಶವನ್ನು ಕಟ್ಟುವಲ್ಲಿ ವಕೀಲರ ಪಾತ್ರ ಮಹಾತ್ವದಾಗಿದೆ ಸ್ವತಂತ್ರ ?ಯ ದೋರಕಿಸುವುದಕ್ಕೆ ನಡೆದ ಹೋರಾಟದಲ್ಲಿ ಹಾಗೂ ನಂತರದಲ್ಲಿ ಜನರ ಹಕ್ಕುಗಳಿಗೆ ಹಾಗೂ ಸಮಸ್ಯೆಗಳಿಗೆ ನಿರಂತರವಾಗಿ ನ್ಯಾಯವಾಧಿಗಳು ಪ್ರಮುಖ ಪಾತ್ರವನ್ನು ವಹಿಸಿದ್ದರೆ. ಅದ್ದರಿಂದ ಕಿರಿಯ ವಕೀಲರು ಹಿರಿಯ ವಕೀಲರಿಂದ ಕಾನೂನಿನ ಜ್ಞಾನವನ್ನು ಪಡೆದುಕೊಂಡು ನಿರಂತರವಾಗಿ ಅಧ್ಯಯನ ಶೀಲರಾಗಿ ,ಪ್ರಮಾಣಿಕತೆ ,ಶಿಸ್ತುಬದ್ದವಾದ ವಕೀಲ ವೃತ್ತಿಯನ್ನು ನಡೆಸಬೇಕು ಎಂದು ತಿಳಿಸಿದರು. ವಕೀಲ ವೃತ್ತಿಯಲ್ಲಿ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಹಿರಿಯ ವಕೀಲರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಾನ್ವಿ ವಕೀಲರ ಸಂಘದ ಅಧ್ಯಕ್ಷರಾದ ರವಿಕುಮಾರ ಪಾಟೀಲ್, ಸಹಾಯಕ ಸರ್ಕಾರಿ ಅಭಿಯೋಜ–ಕರಾದ ಅರ್ಚನಾ ಹನುಮೇಶ, ವಕೀಲರ ಸಂಘದ ಉಪಾಧ್ಯಕ್ಷರಾದ ವಿಶ್ವನಾಥ ರಾಯಪ್ಪ ,ಶಿವಪ್ಪ ನಾಯಕ ಸುಂಕನೂರು, ಪ್ರ,ಕಾರ್ಯದರ್ಶಿ ಯಲ್ಲಪ್ಪ ಹಿರೇಬಾದರದಿನ್ನಿ, ಚಂದ್ರಕಲಾ, ಗೂಗಲ್ ನಾಗರಾಜ, ಸ್ಟೆಲ್ಲಾ ಶಾರ್ಲೆಟ್, ಹಿರಿಯ ನ್ಯಾಯವಾದಿಗಳಾದ ಎ.ಬಿ.ಉಪ್ಪಳಮಠ ವಕೀಲರು, ಶೇಖರಪ್ಪ ಪಾಟೀಲ್, ಬಿ.ಚನ್ನನಗೌಡ ಪಾಟೀಲ್, ಬಿ.ಕೆ.ಅಮರೇಶಪ್ಪ, ಮಲ್ಲಿಕಾರ್ಜುನ ಪಾಟೀಲ್, ಸೇರಿದಂತೆ ಇನ್ನಿತರರು ಇದ್ದರು. 3–ಮಾನ್ವಿ–2: ಮಾನ್ವಿ: ಪಟ್ಟಣದ ವಕೀಲರ ಸಂಘದ ಸಭಾಂಗಣದಲ್ಲಿ ನಡೆದ ವಕೀಲರ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶಿವರಾಜ .ವಿ. ಸಿದ್ದೇಶ್ವರ ಉದ್ಘಾಟಿಸಿದರು. 3–ಮಾನ್ವಿ–3: ಮಾನ್ವಿ: ಪಟ್ಟಣದ ಸಿವೀಲ್ ಮತ್ತು ಜೆ.ಎಂ,ಎಫ್.ಸಿ, ನ್ಯಾಯಾಲಯದ ಆವರಣದಲ್ಲಿ ವಕೀಲರ ದಿನಾಚರಣೆ ಅಂಗವಾಗಿ ವಕೀಲರ ಸಂಘದಿಂದ ನಡೆದ ಅನ್ನದಾನ ಕಾರ್ಯಕ್ರಮಕ್ಕೆ ನ್ಯಾಯಾಧೀಶರಾದ ಶಿವರಾಜ .ವಿ. ಸಿದ್ದೇಶ್ವರ ಚಾಲನೆ ನೀಡಿದರು. 3–ಮಾನ್ವಿ–4: ಮಾನ್ವಿ: ಪಟ್ಟಣದ ವಕೀಲರ ಸಂಘದ ಸಭಾಂಗಣದಲ್ಲಿ ನಡೆದ ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ವಕೀಲ ವೃತ್ತಿಯಲ್ಲಿ 25 ವರ್ಷಗಳಿಂದ ಸೇವೆ

# ಜ.01 ರಿಂದ ಕಲಬುರಗಿ–ಬೆಂಗಳೂರು ರೈಲು ಸಂಚಾರದ ಅವಧಿ ಬದಲಾವಣೆ: ಡಾ.ಬಾಬುರಾವ್

ನೈರುತ್ಯ ದೆಸೆ ನ್ಯೂಸ್

**ರಾಯಚೂರು: ಕಲಬುರಗಿ–ಬೆಂಗಳೂರು ನಡುವೆ ಸಂಚರಿಸುತ್ತಿರುವ ವಂದೇ ಭಾರತ್ ರೈಲಿನ ಸಮಯವನ್ನು 2026ರ ಜನವರಿ 1ರಿಂದ ಅನ್ವಯವಾಗುವಂತೆ ದಕ್ಷಿಣ ಮಧ್ಯ ರೈಲ್ವೆಯು ಬದಲಾಯಿಸಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ತಿಳಿಸಿದ್ದಾರೆ.**

ಈ ಕುರಿತು ಮಾಹಿತಿ ನೀಡಿರುವ ಅವರು, ಕಲಬುರಗಿಯಿಂದ ಬೆಳಿಗ್ಗೆ 5.15ರ ಬದಲು ಬೆಳಿಗ್ಗೆ 6.10ಕ್ಕೆ ಹೊರಟು ಮಧ್ಯಾಹ್ನ 2.10ಕ್ಕೆ ಬೆಂಗಳೂರು ತಲುಪಲಿದೆ. ಪ್ರಯಾಣಿಕರ ಕೋರಿಕೆ ಮೇರೆಗೆ ಸತ್ಯಸಾಯಿ ಪ್ರಶಾಂತಿ ನಿಲಯಂ (ಪುಟ್ಟಪರ್ತಿ) ನಲ್ಲಿ ನಿಲುಗಡೆಯಾಗಲಿದೆ.



ಬೆಳಿಗ್ಗೆ 6.10ಕ್ಕೆ ಕಲಬುರಗಿಯಿಂದ ಹೊರಡುವ ರೈಲು (ಸಂಖ್ಯೆ 22231) ವಾಡಿ, ಯಾದಗಿರಿ, ರಾಯಚೂರು, ಮಂತ್ರಾಲಯಂ ರೋಡ್, ಗುಂತಕಲ್, ಅನಂತಪುರ, ಧರ್ಮಾವರಂ, ಸತ್ಯಸಾಯಿ ಪ್ರಶಾಂತಿ ನಿಲಯಂ, ಯಲಹಂಕ ಮೂಲಕ ಸಾಗಿ ಮಧ್ಯಾಹ್ನ 2.10ಕ್ಕೆ ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ.

ಮಧ್ಯಾಹ್ನ 2.40ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ನಿಂದ ಹೊರಡುವ ರೈಲು (22232) ರಾತ್ರಿ 10.45ಕ್ಕೆ ಕಲಬುರಗಿ ತಲುಪಲಿದೆ. ಈ ಮುಂಚೆ ರಾತ್ರಿ 11.30ಕ್ಕೆ ತಲಪುತ್ತಿತ್ತು ಸೋಲಾಪೂರ ?ಕಲಬುರಗಿ ಸೇವೆ ರದ್ದು ರಾಯಚೂರು: ಸೋಲಾಪೂರ ಯಾರ್ಡ್ ಬ್ಲಾಕ್ ಆಗಿರುವ ಕಾರಣ ಕಲಬುರಗಿ ಸೋಲಾಪೂರ ನಡುವಿನ ರೈಲು ಸಂಚಾರ ರದ್ದುಗೊಳಿಸಲಾಗಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ತಿಳಿಸಿದ್ದಾರೆ.

ಡಿ.13 ರಂದು ಹಾಸನದಿಂದ ಹೊರಡುವ ಹಾಸನ–ಸೋಲಾಪೂರ ರೈಲು (ಸಂಖ್ಯೆ 11312) ಕಲಬುರಗಿಯವರೆಗೆ ಮಾತ್ರ ಸಂಚರಿಸಲಿದ್ದು, ಕಲಬುರಗಿ–ಸೋಲಾಪೂರ ನಡುವಿನ ಸೇವೆಗಳು ರದ್ದಾಗಿವೆ,. ಅದೇರೀತಿಯಾಗಿ ಸೋಲಾಪೂರ ಹಾಸನ ಎಕ್ಸ್ ಪ್ರೆಸ್ ರೈಲು ಡಿ.14 ರಂದು ಸೋಲಾಪೂರದಿಂದ ಹೊರಡಬೇಕಾಗಿದ್ದ ಸೋಲಾಪೂರ ಹಾಸನ ಎಕ್ಸಪ್ರೆಸ್ ರೈಲು (11311) ಕಲಬುರಗಿಯಿಂದ ಹೊರಡಲಿದೆ ಎಂದು ಅವರು ಪತ್ರಿಕಾ ಹೇಳಕೆಯಲ್ಲಿ ತಿಳಿಸಿದ್ದಾರೆ.

# ಮಸ್ಕಿ ಯಲ್ಲಿ ಕೆಡಿಪಿ ಸದಸ್ಯ ದೇವಪ್ಪ ರಾಥೋಡ್ ಸುದ್ದಿಗೋಷ್ಠಿ




ನೈರುತ್ಯ ದೆಸೆ ನ್ಯೂಸ್

**ಮಸ್ಕಿ: ತಾಲ್ಲೂಕಿನ ತಲೇಖಾನ ಗ್ರಾಮ ಪಂಚಾಯತಿಯ ಅಧ್ಯಕ್ಷೆ ಉಮ್ಮವ್ವ ಗ್ಯಾನಪ್ಪ ಸದಸ್ಯತ್ವವನ್ನು ರದ್ದುಗೊಳಿಸಿ 6 ವರ್ಷ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪೀಠಾಧಿಕಾರಿ (ಗ್ರಾ.ಪಂ) ಶಿವಕುಮಾರ ಆದೇಶ ಹೊರಡಿಸಿದ್ದರಿಂದ ಕಲಬುರಗಿ ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಹೈಕೋರ್ಟ್ ಅನರ್ಹ ಆದ–ೇಶಕ್ಕೆ ತಡೆಯಾಜ್ಞೆ ನೀಡಿ ಅಧ್ಯಕ್ಷೆ ಸ್ಥಾನದಲ್ಲಿ ಮುಂದುವರೆಯುವಂತೆ ಹೈ ಕೋರ್ಟ್ ಆದ–ೇಶ ನೀಡಿದೆ ಎಂದು ಕಾಂಗ್ರೆಸ್ ಪಕ್ಷದ ಹಾಗೂ ಕೆಡಿಪಿ ಸದಸ್ಯ ದೇವಪ್ಪ ರಾಥೋಡ್ ಹೇಳಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಗ್ರಾಮ ಪಂಚಾಯತಿಯಲ್ಲಿ ಉಮವ್ವ ಗ್ಯಾನಪ್ಪ ಅಧಿಕಾರದ ಅವಧಿಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ 2023–24 ಮತ್ತು 2024–25ನೇ ಸಾಲಿನಲ್ಲಿ ಎಂಜಿಎನ್‌ಆರ್‌ಇಜಿಎ (ನರೇಗಾ) ಯೋಜನೆಯಡಿಯಲ್ಲಿ ಚೆಕ್ ಮೆಷರಮೆಂಟ್ ಇಲ್ಲದ 22 ಪ್ರಕರಣಗಳಲ್ಲಿ ನಿಯಮ ಬಾಹಿರವಾಗಿ ಹಣ ಪಾವತಿಸಿದ್ದು, ಮತ್ತು 15ನೇ ಹಣಕಾಸು ಯೋಜನೆಯಡಿ ನಿರ್ವಹಿಸಿದ ಕಾಮಗಾರಿಗಳನ್ನು ಸರ್ಕಾರದ ಮಾರ್ಗಸೂಚಿ ಹಾಗೂ ನಿಯಮಗಳನ್ನು ಪಾಲಿಸದೇ ಅನುದಾನವನ್ನು ಖರ್ಚು ಮಾಡಿ ಅಧಿಕಾರ ದುರುಪಯೋಗ ಪಡೆಸಿಕೊಂಡಿದ್ದಾರೆಂದು ಆರೋಪಿಸಿದ್ದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಗ್ರಾಮ ಪಂಚಾಯತ್ ರಾಜ್ ಅಧಿನಿಯಮ–1993ರ ಪ್ರಕರಣ–43(ಎ) ಮತ್ತು 48(4)ರನ್ವಯ ಗ್ರಾಮ ಪಂಚಾಯಿತಿ ಸದಸ್ಯತ್ವ ರದ್ದುಗೊಳಿಸಿ43(ಎ)(2) ರನ್ವಯ ಮುಂದಿನ ಆರು ವರ್ಷಗಳ ಕಾಲ ಯಾವುದೇ ಚುನಾವಣೆಗೆ ನಿಲ್ಲದಂತೆ ಆದೇಶ ಹೊರಡಿಸಿಲಾಗಿತ್ತು.

ದುರುದ್ದೇಶದಿಂದ ನಕಲಿ ದಾಖಲಾತಿಗಳ್ನು ಸೃಷ್ಠಿಸಿ ದೂರು ನೀಡಿದ್ದರೂ. ನಾವು ಸೂಕ್ತ ದಾಖಾಲೆಗಳನ್ನು ಹೈಕೋರ್ಟ್ಗೆ ಸಲ್ಲಿಸಿದ್ದರಿಂದ ದಾಖಲಾತಿಗಳನ್ನು ಪರಿಶೀಲಿಸಿ ವಾದ–ವಿವಾದಗಳನ್ನು ಆಲಿಸಿದ ನಂತರ ಉಮವ್ವ ಗ್ಯಾನಪ್ಪ ಸದಸ್ಯತ್ವ ರದ್ದು ಆದೇಶಕ್ಕೆ ತಡೆಯಾಜ್ಞೆ ನೀಡಿ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವಂತೆ ಹೈಕೋರ್ಟ್ ಆದೇಶ ನೀಡಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕನಕಪ್ಪ ಗುಡಿಹಾಳ, ವೀರನಗೌಡ, ದುರಗಪ್ಪ ಕಟ್ಟಿಮನಿ, ಹನುಂತ ಘಂಟಿ, ಮೌನೇಶ ರಾಥೋಡ್, ಮಾನಸಿಂಗ್ ರಾಥ–ೋಡ್, ಶರಣಪ್ಪ ತಗ್ಗಿ ಸೇರಿದಂತೆ ಇನ್ನಿತರರಿದ್ದರು.

## ಲಿಂಗಸ್ಗೂರಿನ ತಾಯಿ ಮಕ್ಕಳ ಆಸ್ಪತ್ರೆಗೆ ಹೋಗುವ ಗೇಟಿನ ಮುಂದುಗಡೆ ವಿದ್ಯುತ್ ಕಂಬವಿದ್ದು ಅದನ್ನು ತೆರವುಗೊಳಿಸದೆ ಗ್ರಾಮಸ್ಥರ ಮನವಿ

ನೈರುತ್ಯ ದೆಸೆ ನ್ಯೂಸ್

**ಲಿಂಗಸ್ಗೂರಿನ ತಾಯಿ ಮಕ್ಕಳ ಆಸ್ಪತ್ರೆ ಉದ್ಘಾಟನೆಗೆ ಸಿದ್ಧವಾಗಿದ್ದು ಅದರ ಮುಂಭಾಗದ ಮುಂಭಾಗದ ರಸ್ತೆಯಿಂದ ಆಸ್ಪತ್ರೆಗೆ ಹೋಗುವ ಗೇಟಿನ ಮುಂದುಗಡೆ ವಿದ್ಯುತ್ ಕಂಬವಿದ್ದು ಅದನ್ನು ತೆರವುಗೊಳಿಸದೆ ಕಾಂಕ್ರೀಟ್ ಹಾಕಿ ಸಿಸಿ ರಸ್ತೆಯನ್ನು ಆಸ್ಪತ್ರೆಯ ಮುಂದಿನ ಗೇಟ್ನಿಂದ ಮೇನ್ ರೋಡ್ ಮಾಡಿರುವುದು ಅನಾಹುತಕ್ಕೆ ಕಾರಣವಾಗಲಿದೆ.**

ಆಸ್ಪತ್ರೆ ಎಂದರೆ ಆಂಬುಲೆನ್ಸ್ ಗಳು ಇನ್ನಿತರ ವಾಹನಗಳು ಮತ್ತು ತುರ್ತಾಗಿ ರೋಗಿಗಳಿಗೆ ಚಿಕಿತ್ಸೆ ನೀಡಲು ಬರುವಂತಹ ವಾಹನಗಳಿಗೆ ಅನಾನುಕೂಲವಾಗಲಿದ್ದು ಆ ವಿದ್ಯುತ್



ಕಂಬವನ್ನು ಕೂಡಲೇ ಸ್ಥಳಾಂತರಿಸಬೇಕು. ಅದರ ಪಕ್ಕದಲ್ಲಿ ಇರುವಂತ ಇನ್ನೊಂದು ಕಂಬಕ್ಕೂ ಮತ್ತು ಈ ಕಂಬಕ್ಕೂ ಇರುವ ವಿದ್ಯುತ್ ತಂತಿಗಳು ಕೆಳಗಡೆ ಇಳಿ ಬಿದ್ದಿದ್ದು, ಮುಖ್ಯರಸ್ತೆಯ ಪಕ್ಕದಲ್ಲಿಯೇ ಇರುವ ಕಾರಣ ಹುಲ್ಲಿನ ಟ್ರಾಕ್ಟರ್ ಗಳು ಅಲ್ಲಿಂದ ಹಾದು ಹೋಗುವಾಗ ದೊಡ್ಡ ಅನಾಹುತ ಆಗುವ ಸಾಧ್ಯತೆ ಇದೆ.

ತಾಲೂಕಿನ ಜೆಸ್ಕಾಂ ಅಧಿಕಾರಿಗಳು ನಿಷ್ಕ್ರಿಯವಾಗಿರುವುದಕ್ಕೆ ಇದೊಂದು ನಿದರ್ಶನ ಅಂತಾನೆ ಹೇಳಬಹುದು. ಸಾರ್ವಜನಿಕರೇ ಹಿತದೃಷ್ಟಿಯಿಂದ ಇಳಿಬಿದ್ದಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸಿ ಆಸ್ಪತ್ರೆಯ ಮುಂಭಾಗದಲ್ಲಿರುವಂತ ವಿದ್ಯುತ್ ಕಂಬವನ್ನು ಸ್ಥಳಾಂತರಿಸಬೇಕೆಂದು ಸಾರ್ವಜನಿಕರ ಕೋರಿಕೆ...ಕೂಡಲೇ ಇಲಾಖೆಯ ಅಧಿಕಾರಿಗಳು ಕ್ರಮವಹಿಸಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

# ತಂಬಾಕು ಮುಕ್ತ ಯುವ ಅಭಿಯಾನ ಯುವಜನತೆ ತಂಬಾಕು ಉತ್ಪನ್ನಗಳ ಸೇವನೆಯ ದುಷ್ಪರಿಣಾಮಗಳನ್ನು ತಮ್ಮ ಸ್ನೇಹಿತರಿಗೂ ತಿಳಿಸಿ: ಸುನೀಲ್ ಸ್ವಾಮಿ

ನೈರುತ್ಯ ದೆಸೆ ನ್ಯೂಸ್

**ದೇಹದ ಪ್ರತಿಯೊಂದು ಆವಯವಗಳಿಗೆ ಹಾನಿ ಮಾಡುವ ತಂಬಾಕು ಹಾಗೂ ಅದರ ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ತುತ್ತಾಗಿ ಕುಟುಂಬವನ್ನೆ ಸರ್ವನಾಶ ಮಾಡುವ 4000 ಸಾವಿರ ರಾಸಾಯನಿಕಗಳನ್ನು ಹೊಂದಿರುವ ತಂಬಾಕು ಹಾಗೂ ಅದರ ಉತ್ಪನ್ನಗಳನ್ನು ಬಳಸದೆ ಕಾಲೇಜು ವಿಧ್ಯಾರ್ಥಿಗಳು ತಮ್ಮ ಸಹಪಾಠಿಗಳಿಗೆ, ಆತ್ಮೀಯರಿಗೆ ತಿಳಿಸುವ ಮೂಲಕ ಸದೃಢ ಯುವ ಸಮುದಾಯವನ್ನು ರೂಪಿಸಲು ಇಂದಿನಿಂದಲೆ ಹೆಜ್ಜೆ ಇಡೋಣವೆಂದು ಸನ್‌ರೈಸ್ ಪದವಿ ಕಾಲೇಜಿನ ಪ್ರಾಂಶುಪಾಲ ಸುನೀಲ್ ಸ್ವಾಮಿ ತಿಳಿಸಿದರು ವಿಧ್ಯಾರ್ಥಿಗಳಿಗೆ ವಿನಂತಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಜಹೀರಾಬಾದ್




ನಗರ ಆರೋಗ್ಯ ಕೇಂದ್ರ, ಎನ್‌ಎಸ್‌ಎಸ್ ಘಟಕ ರವರ ಸಹಯೋಗದಲ್ಲಿ ರಾಯಚೂರು ಸನ್‌ರೈಸ್ ಪದವಿ ಕಾಲೇಜಿನಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.ಓ ಅಡಿಯಲ್ಲಿ ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಇತ್ತೀಚಿನ ದಿನಗಳಲ್ಲಿ ಗುಟ್ಕಾ, ಪಾನಮಸಾಲ ಸೇರಿದಂತೆ ವಿವಿಧ ತಂಬಾಕು ಉತ್ಪನ್ನಗಳು ಆಕರ್ಷಕ ಹೆಸರುಗಳಿಂದ ಯುವಜನತೆಯನ್ನು ತಮ್ಮೆಡೆಗೆ ಸೆಳೆಯುತ್ತಿವೆ. ಆದರೆ ಹವ್ಯಾಸವಾಗಿ ಆರಂಭವಾಗುವ ತಂಬಾಕು ಸೇವನೆಯು ಚಟವಾಗಿ ಬದಲಾಗಿ ಜೀವನವನ್ನೇ ನಾಶ ಮಾಡುವುದನ್ನು ನಾವು ಮರೆಯಬಾರದು ಎಂದು ತಿಳಿಸಿದರು.

ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಮಾತನಾಡಿ, ಆರೋಗ್ಯದ ಪರಿಣಾಮ ಮಾತ್ರವಲ್ಲದೆ ಕ್ಯಾನ್ಸರ್, ಹೃದಯ ರೋಗ, ಶ್ವಾಸಕೋಶದ ತೊಂದರೆಗಳು, ಹಲ್ಲಿನ ಸಮಸ್ಯೆಗಳು ಉಂಟಾಗುತ್ತವೆ. ಅಲ್ಲದೆ ದೂಮ್ರಪಾನಗಳಾದ ಬೀಡಿ, ಸಿಗರೇಟ್, ಹುಕ್ಕಾ ಮುಂತಾದವುಗಳನ್ನು ಬಳಸುವವರ ಹತ್ತಿರವಿರುವವರಿಗೂ, ಒಡನಾಡಿಗಳಿಗೆ, ಕುಟುಂಬದ ಸದಸ್ಯರಿಗೆ ಹಾಗೂ ಬೀಡಿ ಸಿಗರೇಟ್ ಸೇದುವುದಕ್ಕಾಗಿಯೇ ಕೆಲವು ಅಂಗಡಿಗಳನ್ನು ಗುರ್ತಿಸಿಕೊಳ್ಳುವ ಅಂಗಡಿಗಳ ಮಾಲೀಕರಿಗೂ ಸಹ ಪರೋಕ್ಷ ಧೂಮಪಾನದ ಮೂಲಕ ಹೆಚ್ಚು ಹಾನಿಯುಂಟಾಗುತ್ತದೆ. ಮತ್ತು ಅಕಾಲಿಕ ಸಾವುಗಳಿಗೆ ಕಾರಣವಾಗುತ್ತದೆ.

ತಂಬಾಕಿನ ಬಳಕೆಯಿಂದಾಗಿ ಕ್ಯಾನ್ಸರ್ ಸೇರಿದಂತೆ ದೇಹದ ಬಹುತೇಕ ಎಲ್ಲಾ ಅಂಗಾಂಗಗಳ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದ್ದು, ಪುರುಷರಲ್ಲಿ ವಿಕೃತ ವಿರ್ಯಾಣು ಉತ್ಪಾದನೆ, ಮಹಿಳೆಯರಲ್ಲಿ ಬಂಜೆತನಕ್ಕೆ ಕಾರಣವಾಗುವ ಮೂಲಕ ಸಂತಾನಭಿವೃದ್ಧಿಗೆ ಮಾರಕವಾಗುತ್ತವೆ. ಈ ದಿಶೆಯಲ್ಲಿ ಯುವಜನತೆ ಇಂದಿನಿಂದಲೆ ತಂಬಾಕು ಉತ್ಪನ್ನಗಳ ಬಳಕೆಯಿಂದ ದೂರವಾಗಲು ಮನವಿ ಮಾಡಿದರು.

ಪ್ರತಿಜ್ಞೆ: ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ರವರು ನಶೆ ಮುಕ್ತ ಭಾರತ ಅಡಿಯಲ್ಲಿ ಮಾದಕ, ಪದಾರ್ಥ, ತಂಬಾಕು ಬಳಕೆ ತ್ಯಜಿಸುವ ಕುರಿತು ಪ್ರತಿಜ್ಞೆ ಬೋಧಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪನ್ಯಾಸಕರಾದ ಭೀಮೇಶ್, ಅಮರೇಶ, ಆಫ್ರೀನ್ ಬಾನು, ರಾಜಮಾತಾ, ಬಿಹೆಚ್‌ಇಓ ಸರೋಜಾ ಕೆ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಈರಮ್ಮ, ಪಿಹೆಚ್‌ಸಿಓ ಶಶಿಕಲಾ, ಹೆಚ್‌ಐಓ ಶೃತಿ, ಆಶಾ ಕಾರ್ಯಕರ್ತೆ ಸುಶೀಲಾ ಸೇರಿದಂತೆ ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ರಚನಾ ಶರೀರ (ಅಂಗರಚನಾಶಾಸ್ತ್ರ)

ಆಯುರ್ವೇದ ಶರೀರ ಶಾಸ್ತ್ರ (Ayurvedic Anatomy) ಮಾನವ ದೇಹದ ರಚನೆ, ಅಂಗಾಂಗಗಳ ವಿನ್ಯಾಸ, ನಾಡಿಗಳು, ಸ್ನಾಯುಗಳು, ಅಸ್ಥಿಪಂಜರ, ಅವಯವ ವ್ಯವಸ್ಥೆಗಳ ಅಧ್ಯಯನ ಆಯುರ್ವೇದ ಆಧುನಿಕ ಅನಾಟಮಿ ಎರಡನ್ನೂ ಸಂಯೋಜಿಸಿದ ಕಲಿ ಕೋರ್ಸ್ ಈ ವಿಭಾಗದಲ್ಲಿ ವಿದ್ಯಾರ್ಥಿ ಶರೀರ ವಿಭಜನೆ (Dissection), cadaver studies, marma studies, embryology ಇತ್ಯಾದಿಗಳನ್ನು ಆಳವಾಗಿ ಕಲಿಯುತ್ತಾರೆ. ಒಆ ರಚನಾ ಶರೀರ (ಅಂಗರಚನಾಶಾಸ್ತ್ರ) ಒಂದು ಮೂರು ವರ್ಷಗಳ ಆಯುರ್ವೇದ ಸ್ನಾತಕೋತ್ತರ ಕೋರ್ಸ್ ಆಗಿದ್ದು, ಇದು ಮಾನವ ದೇಹದ ರಚನೆಯ ಬಗ್ಗೆ ಆಳವಾದ ಜ್ಞಾನವನ್ನು ನೀಡುತ್ತದೆ. ಈ ಕೋರ್ಸ್‌ಗೆ ಪ್ರವೇಶ ಪಡೆಯಲು, ವಿದ್ಯಾರ್ಥಿಗಳು AIAPGET ನಂತಹ ಅಖಿಲ ಭಾರತ ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ಈ ಕೋರ್ಸ್‌ನಲ್ಲಿ ಶವಪರೀಕ್ಷೆ ಮತ್ತು ಆಯುರ್ವೇದ ದೃಷ್ಟಿಕೋನದಿಂದ ಅಂಗರಚನಾಶಾಸ್ತ್ರದ ಅಧ್ಯಯನವನ್ನು ಒಳಗೊಂಡಿರುತ್ತದೆ. ಒಆ ರಚನಾ ಶರೀರ (ಅಂಗರಚನಾಶಾಸ್ತ್ರ ಕೋರ್ಸ್‌ನ ಅವಧಿ: 3 ವರ್ಷಗಳು ಸ್ನಾತಕೋತ್ತರ ಪದವಿ, ಪೂರ್ಣ ಸಮಯ ಮಾನವ ದೇಹದ ರಚನೆ, ಮೂಳೆಗಳು, ಅಂಗಗಳು ಮತ್ತು ಇತರ ಅಂಗಗಳ ಬಗ್ಗೆ ಆಳವಾದ ಜ್ಞಾನವನ್ನು ಪಡೆಯಲಾಗುತ್ತದೆ. ಶವಪರೀಕ್ಷೆ, ಮೇಲ್ಮೈ ಮತ್ತು ರೇಡಿಯೋಗ್ರಾಫಿಕ್ ಅಂಗರಚನಾಶಾಸ್ತ್ರದಲ್ಲಿ ಪ್ರಾಯೋಗಿಕ ಪರಿಣತಿ ನೀಡಲಾಗುತ್ತದೆ. ಈ ಕೋರ್ಸ್ ಅನ್ನು ರಾಷ್ಟ್ರೀಯ ಭಾರತೀಯ ವೈದ್ಯಕೀಯ ಆಯೋಗ (NCISM) ನಿಯಂತ್ರಿಸುತ್ತದೆ. ಮಾನವ ದೇಹದ ರಚನೆಯ ಬಗ್ಗೆ ಅಧ್ಯಯನ ಮಾಡುವಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಇದು ಉಪಯುಕ್ತ ಕೋರ್ಸ್ ಆಗಿದೆ. ಈ ಕೋರ್ಸ್ ಆಯುರ್ವೇದ ಪದ್ಧತಿಯಲ್ಲಿದೆ, ಆದ್ದರಿಂದ ವಿದ್ಯಾರ್ಥಿಗಳು ಆಯುರ್ವೇದ ದೃಷ್ಟಿಕೋನದಿಂದ ದೇಹದ ಬಗ್ಗೆ ಕಲಿಯುತ್ತಾರೆ. ಮಾನವ ದೇಹದ ಪ್ರತಿಯೊಂದು ಭಾಗದ ರಚನೆ ಸ್ಥಾನ , ಸಂಬಂಧ , ರಕ್ತಪೂರೈಕೆ , ನರಪೂರೈಕೆ , ಲಸಿಕಾಸಂಚಾರ ವೈಜ್ಞಾನಿಕ ಅರ್ಥ (Function) ದೋಷ ಧಾತು ಮಲ, ಸ್ರೋತಸ್ಸುಗಳು, ಶರೀರದ 7 ಧಾತುಗಳು, 107 ಮಾರ್ಮಗಳು, ನಾಡಿ, ಸ್ನಾಯು, ಅಸ್ಥಿಗಳ ಆಯುರ್ವೇದೀಕ ವರ್ಣನೆ

# ರೈತರಿಗೆ ಸೌಲಭ್ಯ ಕಡಿತ ಸರ್ಕಾರದ ವಿರುದ್ಧ ಭಾಜಪ ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಬಸವ ವೃತ್ತದಲ್ಲಿ ರೈತ ಸಂಘಗಳ ಸಂಯುಕ್ತ ವೇದಿಕೆ ವತಿಯಿಂದ ಭಾರಿ ಪ್ರತಿಭಟನೆ ನಡೆಯಿತು. ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೇ ರೈತರು ಹೇಳತೀರದಷ್ಟು ಸಂಕಷ್ಟವನ್ನು ಎದುರಿಸುತ್ತಿದ್ದು, ಹಿಂದಿನ ಸರ್ಕಾರ ನೀಡುತ್ತಿದ್ದ ಸಹಾಯ?ಅನುದಾನಗಳನ್ನು ಹೊಸ ಸರ್ಕಾರ ಮುಂದುವರಿಸದಿರುವುದು ರೈತರ ಬದುಕಿನ ಮೇಲೆ ನೇರ ಹೊಡೆತವಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದ ರೈತರು ತಮ್ಮ ಬೇಡಿಕೆಗಳೊಂದಿಗೆ "ರೈತರಿಗೆ ನ್ಯಾಯ ಬೇಕು" ಎಂದು ಘೋಷಣೆ ಕೂಗಿದರು.**

ತಾಲೂಕ ಅಧ್ಯಕ್ಷ ವೀರಭದ್ರ ಗೌಡ ಭೋಗವತಿ ಮಾತನಾಡಿ, "ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಡಿ ವಾರ್ಷಿಕ ?6,000 ಮತ್ತು ರಾಜ್ಯ ಸರ್ಕಾರ ನೀಡುತ್ತಿದ್ದ ?4,000 ಸೇರಿ ಒಟ್ಟು ?10,000 ರೈತರ ಕುಟುಂಬಕ್ಕೆ ಮಹತ್ವದ ಆಧಾರವಾಗಿತ್ತು. ವಿದ್ಯಾಸಿರಿ ಮೂಲಕ ಮಕ್ಕಳಿಗೆ ನೀಡುತ್ತಿದ್ದ ಸ್ಕಾಲರ್‌ಶಿಪ್, ಅಮೃತ ಯೋಜನೆಯಡಿ 220 ಕೋಟಿ ರೂಪಾಯಿ ವಿನಿಯೋಗಿಸಿ ಇ?ಪಿಓ ಸ್ಥಾಪನೆ, ಕೇವಲ ?28,000ಕ್ಕೆ ಹೊಲಗಳಿಗೆ ವಿದ್ಯುತ್ ಸಂಪರ್ಕ, ಸಣ್ಣ ರೈತರಿಗೆ ಕೃಷಿ ಪರಿಕರಗಳ ಸಹಾಯ, ತೊಗರಿ?ಜೋಳ?ಭತ್ತಕ್ಕೆ ಖರೀದಿ ಕೇಂದ್ರಗಳ ಮೂಲಕ ಬೆಂಬಲ




ಬೆಲೆಯಲ್ಲಿ ಖರೀದಿ, ಇವೆಲ್ಲವೂ ಹಿಂದಿನ ಸರ್ಕಾರದ ಮೂಲಕ ರೈತರಿಗೆ ದೊರಕಿದ್ದುವು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪಂಚ ಗ್ಯಾರಂಟಿಗಳ ಹೊರತಾಗಿ ರೈತರಿಗೆ ನೀಡಬೇಕಿದ್ದ ಮೂಲಭೂತ ಸೌಲಭ್ಯಗಳನ್ನು ಸಂಪೂರ್ಣ ಬದಿಗುತ್ತಿದೆ" ಎಂದು ಕಿಡಿಕಾರಿದರು.

ಅವರು ಮುಂದುವರಿಸಿ, "ತುಂಗಭದ್ರಾ ಡ್ಯಾಂನಲ್ಲಿ 80 ಟಿಎಂಸಿ ನೀರು ಇದ್ದರೂ ಎರಡನೇ ಬೆಳೆಗೆ ನೀರು ನೀಡದಿರುವುದು ಅತಿದೊಡ್ಡ ಅನ್ಯಾಯ. ಕೃಷಿ ಇಲಾಖೆಯ ಸಹಾಯಧನಕ್ಕೆ ಅಗತ್ಯ ಹಣ ಮೀಸಲಿಡದೇ ರೈತರನ್ನು ಸಂಕಷ್ಟಕ್ಕಿಟ್ಟು, ರಾಜ್ಯ ಸಮ್ಮನ್ ನಿಧಿಯ ?4,000 ನಿಲ್ಲಿಸಿ, ವಿದ್ಯಾಸಿರಿ ರದ್ದುಪಡಿಸಿ, ಸಕಾಲದಲ್ಲಿ ಖರೀದಿ ಕೇಂದ್ರಗಳನ್ನು ತೆರೆಯದೇ ಧಾನ್ಯ ಸಿಲುಕುವಂತಾಗಿಸಿದ್ದು ಸರ್ಕಾರದ ರೈತ ವಿರೋಧಿ ನಿಲುವಿಗೆ ಸಾಕ್ಷಿಯಾಗಿದೆ. ಬೆಂಬಲ ಬೆಲೆಯಲ್ಲಿ ಖರೀದಿಸಿದ ಧಾನ್ಯದ ಹಣವನ್ನು ಕೂಡ ರೈತರಿಗೆ ಸರಿಯಾದ ಸಮಯದಲ್ಲಿ ನೀಡಲಾಗುತ್ತಿಲ್ಲ" ಎಂದು ಹೇಳಿದರು.

ಪ್ರತಿಭಟನೆಯಲ್ಲಿ ರೈತರು ತಮ್ಮ ಹಕ್ಕೊತ್ತಾಯಗಳನ್ನು ಸ್ಪಷ್ಟವಾಗಿ ಪ್ರಸ್ತಾಪಿಸಿದರು. ಎರಡನೇ ಬೆಳೆಗೆ ನೀರು ಒದಗಿಸುವುದು ಅಥವಾ ಸಾಧ್ಯವಿಲ್ಲದಿದ್ದರೆ ಪ್ರತಿ ಏಕರೆಗೆ 25,000 ಪರಿಹಾರ ನೀಡುವುದು, ಅತಿವೃಷ್ಟಿಯಿಂದ ಹಾನಿ ಆದ ಬೆಳೆಗಳಿಗೆ ಪರಿಹಾರ, ತುಂಗಭದ್ರಾ ವ್ಯಾಪ್ತಿಯ ರೈತರಿಗೆ ವಿಶೇಷ ಪ್ಯಾಕೇಜ್, ರೈತರಿಗೆ ಉಚಿತ ವಿದ್ಯುತ್ ಸಂಪರ್ಕ, ಹಾಲಿನ ಸಹಾಯಧನ ಹೆಚ್ಚಳ, ತೊಗರಿ ಜೋಳ ಭತ್ತ ಮೆಕ್ಕೆ ಜೋಳಕ್ಕೆ ಖರೀದಿ ಕೇಂದ್ರಗಳನ್ನು ತಕ್ಷಣ ಆರಂಭಿಸುವುದು, ಮುದ್ರಾಂಕ ಶುಲ್ಕ ಕಡಿತ, ಇ ಪಿಓಯಲ್ಲಿ ನಡೆಯುತ್ತಿರುವ ಅನ್ಯಾಯಕ್ಕೆ ಅಂತ್ಯ ಮತ್ತು ತಪ್ಪಿತಸ್ಥರಿಗೆ ಕಾನೂನು ಕ್ರಮ, ಹತ್ತಿ ಖರೀದಿಗೆ ಅಗತ್ಯ ಮಿಲ್ಲುಗಳ ಒದಗಿಕೆ, ದಾಳಿಂಬೆ ಬೆಳೆಗಾರರಿಗೆ ಹವಾಮಾನ ವೈಪರೀತ್ಯ ಪರಿಹಾರ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟರು.

ಪ್ರತಿಬಟನೆಯ ನಂತರ, ರೈತರ ಪರವಾಗಿ ತಹಸಿಲ್ದಾರ್ ಭೀಮರಾಯ ರಾಮಸಮುದ್ರ ಅವರ ಮುಖಾಂತರ ಮಾನ್ಯ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು. "ರೈತರಿಗೆ ಅನ್ಯಾಯ ಮುಂದುವರಿದರೆ ಹೋರಾಟ ಇನ್ನಷ್ಟು ತೀವ್ರಗೊಳ್ಳಲಿದೆ" ಎಂದು ರೈತರು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಗಂಗಾಧರ ನಾಯಕ, ಶರಣಪ್ಪ ಗೌಡ ನಕ್ಕುಂದಿ, ರೈತ ಮೋರ್ಚಾ ಅಧಕ್ಷ ರುದ್ರಗೌಡ ಮಾದ್ಲಾಪುರ್, ಶಿವಲಿಂಗಯ್ಯ ಸ್ವಾಮಿ, ಶರಣಯ್ಯ ಸ್ವಾಮಿ, ಹನುಮೇಶ ನಾಯಕ್ ಗುರುಸಿದ್ದಪ್ಪ ಕಣ್ಣೂರ್, ವೀರೇಶ್ ನಾಯಕ, ರವಿ ಸಾಹುಕಾರ ಆಳ್ವಾಲ್, ಚಂದ್ರು ನಾಯಕ, ಅಂಬರೀಶ್ ನಾಯಕ ಜಾನೇಕಲ್ಲು ಈರಣ್ಣ ನಾಯಕ್, ಬಿ.ಪಕೀರಪ್ಪ ನಾಯಕ್ ಮಡಿವಾಳ, ದುರ್ಗಪ್ಪ ತಡಕಲ, ದೊರೆಬಾಬು, ದೊಡ್ಡಣ್ಣ ಹೂಗಾರ್, ಮಂಜುನಾಥ್ ನಾಯಕ, ಕುಮಾರ್ ಸ್ವಾಮಿ, ಜನಾರ್ದನ್, ವೆಂಕಟೇಶ್ ಕೆ, ಶಿವಕುಮಾರ್ ಕೆ, ಭಾಸ್ಕರ್ ಜಗಲಿ, ಚಂದ್ರು ಸೇರಿದಂತೆ ಇನ್ನಿತರರು ಉಪಸ್ಥಿತಿ ಇದ್ದರು.

# ಕಲ್ಮಠ ವಿದ್ಯಾಸಂಸ್ಥೆಯಲ್ಲಿ ವಿಶ್ವ ವಿಕಲಚೇತನರ ಹಾಗೂ ವಕೀಲ ದಿನಾಚರಣೆ



❑ ನೈಜ್ಯ ದೆಸೆ ನ್ಯೂಸ್

**ಮಾನವಿ: ವಕೀಲ ವೃತ್ತಿ ಎಂದರೆ ಅದು ಒಂದು ಸತ್ಯದ ಅನ್ವೇಷಣೆ, ವಕೀಲರು ಸತ್ಯದ ಪರವಾಗಿ ಕಾರ್ಯನಿರ್ವಹಿಸಬೇಕು ಎಂದು ಕಲ್ಮಠ ವಿದ್ಯಾಸಂಸ್ಥೆಯ ಹಳೆಯ ವಿದ್ಯಾರ್ಥಿ ಮತ್ತು ವಕೀಲರಾದ ಜಿ. ಚೇತನ್ ಕುಮಾರ್ ಹೇಳಿದರು.**

ಅವರು ಬುಧವಾರ ಪಟ್ಟಣದ ಶ್ರೀ ಪಂಪಾ ವಿರೂಪಾಕ್ಷೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ವಿಶ್ವ ವಿಕಲಚೇತನರ ಹಾಗೂ ವಕೀಲರ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಕೀಲರು ನ್ಯಾಯ ಎತ್ತಿ ಹಿಡಿಯುವಲ್ಲಿ ನಿರ್ಣಾಯಕ ಪಾತ್ರ ವಹಿಸಿರುತ್ತಾರೆ, ಭಾರತದ ಮೊದಲನೆಯ ರಾಷ್ಟ್ರಪತಿ ಡಾ .ಬಾಬು ರಾಜೇಂದ್ರ ಪ್ರಸಾದ್ ಅವರ ಜನ್ಮದಿನದ ಸವಿ ನೆನಪಿಗಾಗಿ ವಕೀಲರ ದಿನಾಚರಣೆ ಆಚರಿಸುತ್ತೇವೆ ಎಂದರು.

ಶಿಕ್ಷಕಿ ರೂಪಾ ವಿಶ್ವ ವಿಕಲಚೇತನರ ದಿನಾಚರಣೆಯ ಕುರಿತು ಮಾತನಾಡಿ ವಿಕಲಚೇತನರನ್ನು ಸಮಾಜದಲ್ಲಿ ಸಮಾನವಾಗಿ ಕಾಣಬೇಕು ಅವರಿಗೆ ಅನುಕಂಪಕ್ಕಿಂತ ಅವಕಾಶ ಮಾಡಿಕೊಡಬೇಕು. ವಿಕಲಚೇತನರಾಗಿದ್ದ ಗದುಗಿನ ಪಂಡಿತ್ ಪುಟ್ಟರಾಜ ಗವಾಯಿಗಳು, ಒಲಂಪಿಕ್ ಆಟಗಾರ್ತಿ ಮಾಲತಿ ಹೊಳ್ಳ ಅರುಣಿಮಾ ಸಿನ್ಹಾ ಅಂತಹವರು ಮಕ್ಕಳಿಗೆ ಆದರ್ಶ ಪ್ರಾಯವಾಗಿರಬೇಕು ಎಂದು ಹೇಳಿದರು. ಕಲ್ಮಠ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ್ ಕಮತರ್ ವಕೀಲ ದಿನಾಚರಣೆಯ ಕುರಿತು ಮಾತನಾಡಿದರು. ಕಲ್ಮಠ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಧ್ಯಕ್ಷತೆ ವಹಿಸಿದರು. ವಿಕಲಚೇತನ ವಿದ್ಯಾರ್ಥಿ ಹುಲಿಗೆಯ್ಯ ಆರನೇ ತರಗತಿ ಅನಿಲ್ ನಾಲ್ಕನೇ ತರಗತಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ಶರಣಬಸವ, ಶ್ರೀ ರಾಮ್, ಪೂಜಾ, ಸಮಂತ, ಅನಿಸಿಕೆ ವ್ಯಕ್ತಪಡಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಕೇಮ್ಯಾ ನಾಯ್ಕ, ಪವಿತ್ರ, ಮಹಾಂತಮ್ಮ, ಪ್ರಭಾವತಿ, ಎಂ. ಎಂ. ಹಿರೇಮಠ, ಬ್ರಮರಾಂಭ, ನರಸಿಂಹ, ರಾಘವೇಂದ್ರ, ಶಾಂತಸ್ವಾಮಿ ಇತರರು ಭಾಗವಹಿಸಿದ್ದರು. ಕುಮಾರಿ ರಿಜ್ವಾನ ಬೇಗ ಕಾರ್ಯಕ್ರಮ ನಿರೂಪಿಸಿದರು. ಸೃಷ್ಟಿ ಮತ್ತು ಭಾರತಿ ಪ್ರಾರ್ಥಿಸಿದರು. ಕುಮಾರಿ ಸುಜಾತ ಸ್ವಾಗತಿಸಿದರು.




❑ ನೈಜ್ಯ ದೆಸೆ ನ್ಯೂಸ್

**ನಾಳೆ ದಿ. O4.12.2025ರಂದು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ರಾಜ್ಯ ಮಟ್ಟದ ವಯಕ್ತಿಕ ಕ್ರೀಡಾಕೂಟಕ್ಕೆ ತೆರಳುತ್ತಿರುವ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯ ಇಬ್ಬರು 1) ಅಮರೇಶ್ ತಂದಿ ಅಯ್ಯಾಳೆಪ್ಪಾ ಒಣಿಕೇರಿ ಹಾಗೂ 2)ಲಕ್ಷ್ಮಿ ತಂದಿ ಮಲ್ಲಪ್ಪ ಜಗ್ಗಿನ ವಿದ್ಯಾರ್ಥಿಗಳಿಗೆ ಶುಭವಾಗಲಿ ಒಳ್ಳೆಯ ರೀತಿಯಲ್ಲಿ ಭಾಗವಹಿಸಿ ನಮ್ಮ ಬಳಗಾನೂರಿಗೆ ಕೀರ್ತಿ ತರಲೆಂದು ಆಶಿಸೋಣ**

# ರಾಯಚೂರಲ್ಲಿ ದಾಖಲೆಯ 2419 ಮನೆಗಳನ್ನು ನಿರ್ಮಿಸಿ ಬಡವರಿಗೆ ವಿತರಿಸುತ್ತಿರುವುದು ಮಹತ್ತರ ಕಾರ್ಯ: ಬೈರತಿ ಸುರೇಶ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 03 (ಕ.ವಾ.): ಜಿ+3 ಮಾದರಿಯಲ್ಲಿ ಅನುಮೋದನೆಗೊಂಡು, ಪ್ರಧಾನಮಂತ್ರಿ ಆವಾಸ್ ಯೋಜನೆಯ ಉಪ ಘಟಕ ಎಎಚ್‌ಪಿ ಯೋಜನೆಯಡಿ ರಾಯಚೂರು ಮಹಾನಗರ ಪಾಲಿಕೆಗೆ 54ನೇ ಸಿಎಸ್‌ಎಂಸಿಯಲ್ಲಿ, ಯರಮರಸ್ ಹತ್ತಿರದ ವಿಮಾನ ನಿಲ್ದಾಣ ಬಳಿಯಲ್ಲಿ ನಿರ್ಮಾಣ ಹಂತದಲ್ಲಿರುವ 2419 ವಸತಿ ಸಮುಚ್ಚಯದ ಸ್ಥಳಕ್ಕೆ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬೈರತಿ ಸುರೇಶ ಅವರು ಡಿಸೆಂಬರ್ 3ರಂದು ಭೇಟಿ ನೀಡಿದರು.**

ಪೂರ್ವ ನಿಗದಿಯಂತೆ, ಬೆಳಗ್ಗೆ ಬಳ್ಳಾರಿಯಿಂದ ಹೆಲಿಕ್ಯಾಪ್ಟರ್ ಮೂಲಕ ಹೊರಟು ರಾಯಚೂರ ನಗರಕ್ಕೆ ಆಗಮಿಸಿ ಮಧ್ಯಾಹ್ನ 12.15ರ ವೇಳೆಗೆ ವಸತಿ ಸಮುಚ್ಚಯ ಸ್ಥಳಕ್ಕೆ ಆಗಮಿಸಿ ಕಾಮಗಾರಿಯ ಬಗ್ಗೆ ಮಾಹಿತಿ ಪಡೆದುಕೊಂಡರು.



ಕಾಮಗಾರಿಯನ್ನು ಬೇಗನೇ ಪೂರ್ಣಗೊಳಿಸಿ, ಮನೆಗಳನ್ನು ಬಡಜನತೆಗೆ ವಿತರಿಸಲು ಕ್ರಮವಹಿಸುವಂತೆ ಸಚಿವರು ಸೂಚನೆ ನೀಡಿದರು. ಈ ರೀತಿ, ಜಿ+3 ಸಮುಚ್ಚಯ ನಿರ್ಮಾಣ ಕಾರ್ಯವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಲ್ಲಿ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿದೆ. ಬಡವರಿಗೆ ಮನೆಗಳನ್ನು ನಿರ್ಮಿಸಿ ಕೊಡುವ ಈ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ.

ದಾಖಲೆಯ 2419 ಮನೆಗಳನ್ನು ನಿರ್ಮಿಸಿ ಕಡುಬಡವರಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಾಮಾನ್ಯ ವರ್ಗದ ಹಾಗೂ ಹಿಂದುಳಿದ ವರ್ಗದ ಜನತೆಗೆ ನೀಡುತ್ತಿರುವುದು ರಾಯಚೂರ ಇತಿಹಾಸದಲ್ಲಿ ಪ್ರಪ್ರಥಮವಾದ ದಾಖಲಾರ್ಹ ಕಾರ್ಯವಾಗಿದೆ ಎಂದು ಸಚಿವರು ತಿಳಿಸಿದರು.

ಮೌಲಸೌಕರ್ಯ ಕಲ್ಪಿಸಲು ಕ್ರಮ: ರಾಯಚೂರು ವಿಮಾನ ನಿಲ್ದಾಣದ ಬಳಿಯಲ್ಲಿ ನಿರ್ಮಾಣವಾಗುತ್ತಿರುವ ಜಿ+3 ವಸತಿ ಸಮುಚ್ಚಯಕ್ಕೆ ಬೇಕಿರುವ ರಸ್ತೆ ಸಂಪರ್ಕ, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಾರ್ಯಕ್ಕೆ ಬೇಕಾಗಿರುವ ಹೆಚ್ಚುವರಿ ಅನುದಾನವನ್ನು ನಗರಾಭಿವೃದ್ಧಿ ಇಲಾಖೆಯಿಂದ ಕೊಡುವುದಾಗಿ ಸಚಿವರು ಇದೆ ವೇಳೆ ತಿಳಿಸಿದರು. ಈ ಮನೆಗಳನ್ನು 44 ಎಕರೆ ಜಾಗದಲ್ಲಿ ನಿರ್ಮಾಣ ಮಾಡಲಾಗುತ್ತಿದೆ.

ಮನೆಗಳ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿದೆ. ಪರಿಶಿಷ್ಟ ಜಾತಿಗೆ 951 ಮನೆಗಳು, ಪರಿಶಿಷ್ಟ ಪಂಗಡಕ್ಕೆ 1053 ಮನೆಗಳು, ಸಾಮಾನ್ಯ ವರ್ಗಕ್ಕೆ 228 ಮನೆಗಳು ಮತ್ತು ಹಿಂದುಳಿದ ವರ್ಗಕ್ಕೆ 187 ಮನೆಗಳು ಅನುಮೋದನೆಯಾಗಿವೆ. ಈ ಯೋಜನೆಯ ಅಂದಾಜು ವೆಚ್ಚ 9 ಲಕ್ಷ ಇರುತ್ತದೆ. ಎಸ್‌ಎಸಿ ಮತ್ತು ಎಸ್‌ಟಿ ಅವರಿಗೆ ಕೇಂದ್ರ ಮತ್ತು ರಾಜ್ಯದಿಂದ ಸಬ್ಸಿಡಿ ಅನುದಾನ ರಾಜ್ಯ ಸರ್ಕಾರದಿಂದ 2 ಲಕ್ಷ ರೂ ಹಾಗೂ ಕೇಂದ್ರ ಸರ್ಕಾರದ 1.5 ಲಕ್ಷ ರೂ ಅನುದಾನ ಸೇರಿ ಒಟ್ಟು 3.50 ಲಕ್ಷ ರೂ ನಿಗದಿಪಡಿಸಲಾಗಿದೆ. ಬ್ಯಾಂಕಿನಿಂದ ಲೋನ್ ಪಡೆದು ಬಾಕಿ ಉಳಿದ ಅನುದಾನವನ್ನು ಫಲಾನುಭವಿಗಳೇ ಭರಿಸಬೇಕಿರುತ್ತದೆ ಎಂದು ಜಿಲ್ಲಾಧಿಕಾರಿ ನಿತೀಶ್ ಕೆ ಹಾಗೂ ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ ಅವರು ಸಚಿವರಿಗೆ ಮಾಹಿತಿ ನೀಡಿದರು. ಈ ವೇಳೆ ಮಸ್ಕಿ ಶಾಸಕರಾದ ಬಸನಗೌಡ ತುರವಿಹಾಳ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಏಗನೂರ ಗ್ರಾಪಂ ಅಧ್ಯಕ್ಷ

# ವಿದ್ಯಾರ್ಥಿಗಳು ಪಠ್ಯಪುಸ್ತಕದ ಜೊತೆಗೆ ಕ್ರೀಡೆಗಳಿಗೂ ಮಹತ್ವ ನೀಡಿ ಶಾಸಕ ಹಂಪನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್


**ಸಿಂಧನೂರು: ಎಫ್.ಆರ್.ಸಿ. ಎಸ್. ಕ್ಲಬ್, ಸಿಂಧನೂರನಲ್ಲಿ ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ಬೆಂಗಳೂರು, ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ರಾಯಚೂರು. ಆರ್.ಜಿ.ಎಂ. ಪದವಿ ಪೂರ್ವ ಕಾಲೇಜು, ಆಕ್ಸ್‌ಫರ್ಡ್ ಪದವಿ ಪೂರ್ವ ಕಾಲೇಜು, ಎಫ್.ಆರ್.ಸಿ.ಎಸ್ ಕ್ಲಬ್ ಸಿಂಧನೂರು, ಸಿಂಧನೂರು ತಾಲೂಕ ಸರಕಾರಿ ಮತ್ತು ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳು ಸಿಂಧನೂರು ಇವರುಗಳ ಸಂಯುಕ್ತಾಶ್ರಯದಲ್ಲಿ 2025-2026ನೇ ಸಾಲಿನ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಲಾನ್ ಟೆನ್ನಿಸ್ ಪಂದ್ಯಾವಳಿಗಳ ಉದ್ಘಾಟನೆಯನ್ನು ಶಾಸಕ ಹಂಪನಗೌಡ ಬಾದರ್ಲಿ ಹಾಗೂ ಮಾಜಿ ಸಂಸದರು ಕೆ ವಿರುಪಾಕ್ಷಪ್ಪನವರು ಲಾಲ್ ಟೆನಿಸ್ ಆಡುವುದರ ಮೂಲಕ ಉದ್ಘಾಟನೆಯನ್ನು ಮಾಡಿದರು.**

ನಂತರ ಮಾತನಾಡಿದ ಶಾಸಕರು ,ಶಿಕ್ಷಕರು ಮಕ್ಕಳಿಗೆ ಪಠ್ಯವಷ್ಟೇ ಆಸಕ್ತಿ ಬೆಳೆದೇ



ಕ್ರೀಡೆಯಲ್ಲೂ ಸಾಧಕರನ್ನಾಗಿ ಸಬೇಕು," ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು ಮಕ್ಕಳಿಗೆ ಕ್ರೀಡೆಗಳಿಗೆ ಸಾಕಷ್ಟು ತರಬೇತಿ ಮತ್ತು ಪಂದ್ಯಗಳಲ್ಲಿಭಾಗವಹಿಸುವ ಅವಕಾಶ ನೀಡಬೇಕು. ಕ್ರೀಡೆಗಳು ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಹೆಚ್ಚಿಸುವ ಕಾರಣ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಕಾರಣವಾಗುತ್ತದೆ ಎಂದರು..

ಶಾಲಾ ಶಿಕ್ಷಣ ಇಲಾಖೆ ಕಾಲೇಜು ವಿಭಾಗದ ಉಪನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿ ಮಾತನಾಡಿ, 'ಸಿಂಧನೂರಿನ ಟೆನಿಸ್ ಕ್ಲಬ್ ರಾಜ್ಯದ ಗಮನಸೆಳೆದಿದೆ. ರಾಷ್ಟ್ರಮಟ್ಟದ ಸಿಂಧನೂರಿನಲ್ಲಿ ಆಯೋಜಿಸುವ ಚಿಂತನೆ ನಡೆದಿದೆ. ನಾವು ಹಿಂದುಳಿದ ಜಿಲ್ಲೆಯಲ್ಲಿದ್ದೇವೆ ಎಂಬ ಭಾವನೆ ಈಗಿಲ್ಲ, ಕಾಲ ಬದಲಾದಂತೆ



ಬದಲಾವಣೆ ಆಗುತ್ತಿದೆ," ಎಂದರು.

ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಮಾತನಾಡಿದರು.ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರೀಡೆಗಳ ಪ್ರಾಮುಖ್ಯತೆ ಬಹಳ ಮುಖ್ಯ ಏಕೆಂದರೆ ಶಿಕ್ಷಣದಲ್ಲಿ ಕ್ರೀಡೆಗಳ ಮಹತ್ವ ಆರೋಗ್ಯಕರ ದೇಹ ಮತ್ತು ಮನಸ್ಸನ್ನು ಬೆಳೆಸುವಲ್ಲಿ ಕ್ರೀಡೆ ಮತ್ತು ವ್ಯಾಯಾಮವು ಪ್ರಬಲ ಸಾಧನವಾಗಿದೆ..ಇದು ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಅವರ ಮನಸ್ಥಿತಿಯನ್ನು ಹೆಚ್ಚಿಸುತ್ತದೆ. ಕ್ರೀಡೆ ಆರೋಗ್ಯಕರ ಮೂಳೆಗಳು ಮತ್ತು ಸ್ನಾಯುಗಳನ್ನು ನಿರ್ಮಿಸುತ್ತದೆ, ಫಿಟ್ನೆಸ್ ಅನ್ನು ಹೆಚ್ಚಿಸುತ್ತದೆ, ನಿದ್ರೆಯನ್ನು ಸುಧಾರಿಸುತ್ತದೆ ಮತ್ತು ಅವರು ಬೆರೆಯಲು ಸಹಾಯ ಮಾಡುತ್ತದೆ. ಕ್ರೀಡೆಗಳನ್ನು ಆಡುವುದರಿಂದ ಮಗುವಿನ ಸ್ವಾಭಿಮಾನ ಮತ್ತು ಆತ್ಮವಿಶ್ವಾಸ ಹೆಚ್ಚಾಗುತ್ತದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಎಆರ್.ಸಿಎಸ್ ಕ್ಲಬ್ ಅಧ್ಯಕ್ಷ ಚಂದ್ರಶೇಖರ ಪಾಟೀಲ್, ಆರ್‌ಜಿಎಂ ಶಿಕ್ಷಣ ಸಂಸ್ಥೆ ಕಾರ್ಯ ದರ್ಶಿ ಆರ್ .ಪದ್ಮನಾಭ್, ಆಕ್ಸ್ಫರ್ಡ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಸತ್ಯನಾರಾಯಣ ಶ್ರೇಷ್ಠಿ, ತಹಸೀಲ್ದಾರ್ ಅರುಣ್ ಎಚ್.ದೇಸಾಯಿ, ತಾ.ಪಂ. ಇಓ ಚಂದ್ರಶೇಖರ, ಕ್ರೀಡಾ ಸಹಾಯಕ ನಿರ್ದೇಶಕ ಡಾ.ಗುಬ್ಬಿಗೂಡು ರಮೇಶ, ಜಿಲ್ಲಾ ಪ.ಪೂ. ಕಾಲೇಜು ಪ್ರಾಂಶುಪಾಲರ ಸಂಘದ ಕಾರ್ಯದರ್ಶಿ ಡಾ.ಶಿವರಾಜ ಎಸ್.. ಪಾಟೀಲ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಶ್ರೀ ಮಹರ್ಷಿ ವಾಲ್ಮೀಕಿ ವಿವಿ ವಿದ್ಯಾವಿಷಯಕ ಪರಿಷತ್ ಸದಸ್ಯ ಆರ್.ಅನಿಲಕುಮಾರ , ಸಿಂಧನೂರು ತಾಲೂಕ ಸರ್ಕಾರಿ ಮತ್ತು ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳ ಉಪನ್ಯಾಸಕರು ಆಡಳಿತ ಮಂಡಳಿಯವರು ವಿದ್ಯಾರ್ಥಿಗಳು ಹಾಗೂ ಇತರರಿದ್ದರು.